ಅಪರಂಜಿ

ಮಾರ್ಚ್ 2006

ತಿಳಿನಗೆಯ ಕಾರಂಜಿ



ಪ್ರಕಾಶ್
ಬಾಗೂರು ಚಂದ್ರು
ತೀ.ನಂ. ಶ್ರೀಕಂಠಯ್ಯ
ಸಿ.ಆರ್. ಸತ್ಯ
ಕು.ಕ.
ಸಾಯಿಲಕ್ಷ್ಮಿ .ಎಸ್
ಬೇಲೂರು ರಾಮಮೂರ್ತಿ
ದಂನಆ
ಎನ್. ರಾಮನಾಥ್
ಎಚ್. ಗೋಪಾಲಕೃಷ್ಣ
ಶಂಸ
ಮಣಿ ಬೆಂಗಳೂರು
ಧೃತಿ
ಅರುಣಾ ಆರ್. ಕಾರಂತ
ರುಕ್ಮಿಣಿಮಾಲಾ

ಬಿಡಿ ಪ್ರತಿ: ರೂ. 10.00

ಅಪರಂಜಿ

ತಿಳಿನಗೆಯ ಕಾರಂಜಿ



ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರಜೋಡಣೆ:
ಒಮೇಗಾ ಲೇಸರ್ ಟೆಕ್

ಈ ಸಂಚಿಕೆಯಲ್ಲಿ.....



ಸಂಪುಟ 23 ಸಂಚಿಕೆ - 6

ಮಾರ್ಚ್ - 2006

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 ದೂರವಾಣಿ: 080 - 23345259
email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್,
ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. ದೂರವಾಣಿ: 26688488



○ ಪ್ರಕಾಶ್

ಪೇಷಾವರ್‌ನ ಹೋಟೇಲ್‌ನಲ್ಲಿ ಭಾರತದ ಬಾವುಟ ತಲೆ ಕೆಳಕಾಗಿ ಹಾಕಿದ್ದಕ್ಕೂ ಭಾರತದ ಸೋಲಿಗೂ ಸಂಬಂಧ ಕಲ್ಪಿಸುವುದು ಕುಹಕ!!

★★★

ಸದನದ ಕೋಲಾಹಲ ನೋಡಿ, ಬಾಹುಬಲಿಯ ಮುಖದಲ್ಲಿ ಕಿರುನಗೆ ಮೂಡಿತಂತೆ!!

★★★

ನಿಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇದೆಯೇ ಎಂದು ಖಚಿತಪಡಿಸಿಕೊಳ್ಳಿ

- ಪತ್ರಿಕೆ

ಏಕೆ?!

★★★

ಹಾಲಿವುಡ್ ಭಾಷೆಯಲ್ಲಿ 'Return of Yedi' ಅನ್ನಬಹುದು ಈಗ!!

★★★

ಪೂರ್ವ ಜನ್ಮದ ಪುಣ್ಯ

- ಶ್ರೀ ಕುಮಾರಸ್ವಾಮಿ

ಇದೂ Non-Secular ಎಂದು ಅಪರಂಜಿ ಗೊಣಗಿದಳಂತೆ!!

★★★

ಉತ್ತರ ಪ್ರದೇಶದ ಮುಖ್ಯಮಂತ್ರಿ ಅವರಿಗೆ 22 ಕೋಟಿ ವಿಮಾನ

- ಸುದ್ದಿ

ಇದಕ್ಕೆ ಉತ್ತರ ಅವರು ಕೊಡಲೇ ಬೇಕು;

★★★

ಬಾಹುಬಲಿಗೆ ಕೈ ಎತ್ತುವೆ

- ಶ್ರೀ ರೇವಣ್ಣ

ಅವರಿಗೆ ಈ ವೈರಾಗ್ಯ ಬಂದದ್ದು ಸಂತೋಷದ ಸಂಗತಿ!!

★★★

ಗುಲಾಬಿ ಹೂವು, ಮುಳ್ಳು ಯಾವುದನ್ನು ನೋಡುತ್ತೀರಿ?

- ಶ್ರೀ ಕುಮಾರಸ್ವಾಮಿ ಪ್ರಶ್ನೆ

ಅರೆ, ಅವರು ಮಣ್ಣನ್ನು ಮರೆತಂತಿದೆ!!

★★★

ಸಚಿವ ಸ್ಥಾನಕ್ಕೆ ತೀವ್ರ ಲಾಬಿ

- ಶೀರ್ಷಿಕೆ

'ಜಾತ್ಯಾತೀತ ಸಂಪುಟ' ಬರುತ್ತದೆಯೇ ಎಂದು ಕಾದು ನೋಡಬೇಕು!!

★★★

ನಾನು ಕನ್ನಡದಲ್ಲೇ ಮಾತನಾಡುವೆ

- ನೂತನ ಮುಖ್ಯಮಂತ್ರಿಗಳು

How nice!!

★★★





ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

- ಬಾಗೂರು ಚಂದ್ರು

ಇದು ತೀ.ನಂ. ಶ್ರೀಕಂಠಯ್ಯನವರ ಜನ್ಮ ಶತಮಾನೋತ್ಸವದ ವರ್ಷ. ನಮಗೆಲ್ಲಾ ಕನ್ನಡ ಕಲಿಸಿದ 'ಕನ್ನಡ ಮಧ್ಯಮ ವ್ಯಾಕರಣ' ರಚಿಸಿದವರು ತೀನಂಶ್ರೀ. ಕುವೆಂಪು ಆಚಾರ್ಯ ಕೃತಿ ಎಂದು ಕರೆದ ತೀನಂಶ್ರೀಯವರ 'ಭಾರತೀಯ ಕಾವ್ಯ ಮೀಮಾಂಸೆ'ಯನ್ನು ಈಗಾಗಲೇ ಮೂರು ತಲೆಮಾರಿನ ಕನ್ನಡ ಎಂ.ಎ. ವಿದ್ಯಾರ್ಥಿಗಳು ಅಭ್ಯಾಸ ಮಾಡಿದ್ದಾರೆ, ಮುಂದಿನ ಹಲವಾರು ತಲೆಮಾರಿನವರೂ ಮಾಡುತ್ತಾರೆ. ವ್ಯಾಕರಣ, ಭಾಷಾ ವಿಜ್ಞಾನ, ಗ್ರಂಥ ಸಂಪಾದನೆ, ಪ್ರಾಚೀನ ಸಾಹಿತ್ಯಾಧ್ಯಯನ ಮೊದಲಾದ ಪಾಂಡಿತ್ಯ ಕ್ಷೇತ್ರಗಳಲ್ಲಿ ತೀನಂಶ್ರೀ ಮಾರ್ಗಾನ್ವೇಷಕರು. ಅವರ ಸಾಧನೆ ಪಾಂಡಿತ್ಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲ. ಅವರು ಕವಿ, ವಿಮರ್ಶಕ ಲಲಿತ ಪ್ರಬಂಧಕಾರರೂ ಕೂಡ. 1932 ರಲ್ಲಿ ಪ್ರಕಟವಾದ ಅವರ 'ಒಲುಮೆ' ಆಧುನಿಕ ಕನ್ನಡದ ಮೊದಲ ಪ್ರೇಮ ಗೀತೆಗಳ ಸಂಕಲನವೆಂದು ವಿಮರ್ಶಕರು ಗುರುತಿಸುತ್ತಾರೆ.

ಕಾವ್ಯ ಮೀಮಾಂಸೆಯಲ್ಲಿ ತೀನಂಶ್ರೀ ಹಾಸ್ಯದ ಬಗೆಗೆ ಹೀಗೆ ಹೇಳುತ್ತಾರೆ: ಹಾಸ್ಯದಲ್ಲಿ ಹಲವು ಬಗೆಗಳುಂಟು. ಅದು ಸನ್ನಿವೇಶದಲ್ಲಿ, ಸ್ವಭಾವದಲ್ಲಿ, ಮಾತುಕಥೆಯಲ್ಲಿ ಎಲ್ಲದರಲ್ಲೂ ಉಕ್ಕಬಹುದು. ಮೃದು ಹಾಸ್ಯವುಂಟು, ಕಟು ಹಾಸ್ಯವುಂಟು, ಕುತ್ಸಿಕ ಹಾಸ್ಯವುಂಟು, ಉದ್ದೇಶಪೂರ್ವಕವಾದುದ್ದುಂಟು, ಅರಿವಿಲ್ಲದೆ ಆಕಸ್ಮಿಕವಾಗಿ ಹೊಮ್ಮುವುದುಂಟು. ಹಾಸ್ಯವು ಆರು ವಿಧ - ಮುಗುಳುನಗೆ, ಅರಳುನಗೆ, ತುಂಬುನಗೆ, ಬಿರುನಗೆ, ಹುಚ್ಚುನಗೆ ಮತ್ತು ಹುಚ್ಚ ಹುಚ್ಚುನಗೆ. ಒಂದಕ್ಕೂ ಇನ್ನೊಂದಕ್ಕೂ ಇರುವ ವ್ಯತ್ಯಾಸವೆಲ್ಲ - ತುಟಿ ಎಷ್ಟರಮಟ್ಟಿಗೆ ತೆರೆದಿರುತ್ತದೆ, ಹಲ್ಲುಸಾಲಿನ ಎಷ್ಟು ಭಾಗ ಗೋಚರಿಸುತ್ತದೆ, ಕಣ್ಣು ಎಷ್ಟು ಅಗಲವಾಗಿ ಅರಳುತ್ತದೆ, ಶಬ್ದ ಕೇಳಬರುತ್ತದೆಯೆ, ಕಣ್ಣೀರು ಹರಿಯುತ್ತದೆಯೆ, ಮೈಯ ಅಂಗಗಳು ಕಂಪಿಸುತ್ತವೆಯೆ ಎಂಬ ವಿವರಗಳನ್ನು ಅವಲಂಬಿಸಿದೆ. ಅನೌಚಿತ್ಯ ಹಾಸ್ಯದ ಮೂಲ. ಇಂತಹ ಅನೌಚಿತ್ಯ ಜಗತ್ತಿನ ಸಕಲ ವಸ್ತುಗಳಲ್ಲೂ ಕ್ರಿಯೆಗಳಲ್ಲೂ ಸಾಧ್ಯ.

ತೀನಂಶ್ರೀ ಹಾಸ್ಯದ ಮೀಮಾಂಸೆ ಮಾತ್ರ ಮಾಡಿದವರಲ್ಲ. ಅದನ್ನು ಬಾಳಿದವರು, ಅನುಭವಿಸಿದವರು ಇತರರೊಡನೆ ಹಂಚಿಕೊಂಡವರು. ಲಲಿತ ಪ್ರಬಂಧವನ್ನು ಮಂದ್ರ ಶ್ರುತಿಯ, ಕೆಳದನಿಯ ಭಾವಗೀತೆಗಳು ಎಂದು ಕರೆದ ತೀನಂಶ್ರೀ ಈ ಮಾತನ್ನು ಸಮರ್ಥಿಸಲು ಎನ್ನುವಂತೆ ಏಳೆಂಟು ಪ್ರಂಬಂಧಗಳನ್ನು ಬರೆದಿದ್ದಾರೆ. ಇಂತಹ ಒಂದು ಪ್ರಬಂಧ 'ನೆಗಡಿ' ಅವರ ಹಿರಿಯ ಮಿತ್ರರೊಬ್ಬರು 'ತೀನಂಶ್ರೀಯವರ ನೆಗಡಿ ಪ್ರಸಿದ್ಧ, ಅದು ಬರುವುದು ತಿಂಗಳಿಗೆರಡು ಸಾರಿ, ಒಂದೊಂದು ಸಾರಿಯೂ ಅದಿರುವುದು ಹದಿನೈದು ದಿನ ಎಂದು ನಮ್ಮೆಲ್ಲರಲ್ಲಿ - ಶ್ರೀಕಂಠಯ್ಯನವರೂ ಸೇರಿ - ಪ್ರತೀತಿ' ಎಂದು ಬರೆದಿದ್ದಾರೆ. ತೀನಂಶ್ರೀಯವರ ಈ ನೆಗಡಿಯಿಂದ ಅವರ 'ನೆಗಡಿ' ಪ್ರಬಂಧಕ್ಕೆ ಪ್ರಸಿದ್ಧಿ ಬಂದಿತೋ ಅಥವಾ ಈ ಪ್ರಬಂಧದಿಂದ ಅವರ ನೆಗಡಿಗೆ ಪ್ರಸಿದ್ಧಿ ಬಂದಿತೋ ಗೊತ್ತಿಲ್ಲ!

ಇಲ್ಲಿರುವ 'ಸಂಟರು' ತೀನಂಶ್ರೀಯವರ ಇನ್ನೊಂದು ಪ್ರಸಿದ್ಧ ಪ್ರಬಂಧ.

ನಂಟರು

– ತೀ.ನಂ. ಶ್ರೀಕಂಠಯ್ಯ

ಯಾರು ನಂಟರು?

''ಇದು ಎಂಥ ಪ್ರಶ್ನೆ! ಎಳೆಯ ಮಕ್ಕಳಿಗೆ ಕೂಡ ಯಾರು ನಂಟರು ಎಂದು ಗೊತ್ತಿದೆಯಲ್ಲಾ!'' ಎಂದು ಹಾಸ್ಯ ಮಾಡಬೇಡಿ. ಇದು ಎಷ್ಟು ತೊಡಕಾದ ಸಮಸ್ಯೆ ಎನ್ನುವುದು ಒಂದು ಕ್ಷಣದಲ್ಲಿ ಮನದಟ್ಟಾಗುತ್ತದೆ.

ಮಾವ, ಭಾವ, ಅತ್ತೆ, ಮೈದುನ - ಇವರೆಲ್ಲರೂ ನಂಟರೆಂದು ನೀವು ಬೇಗ ಹೇಳಿಬಿಡಬಹುದು. ರಕ್ತ ಸಂಬಂಧಿಗಳೆಲ್ಲರೂ ನಂಟರೆಂದು ಶಾಸ್ತ್ರ ಪರಿಷ್ಕೃತವಾದ ಬುದ್ಧಿಯುಳ್ಳವರು ಲಕ್ಷಣವನ್ನೂ ಕಲ್ಪಿಸಬಹುದು. ಆದರೆ ಬಾಂಧವ್ಯದ ರಹಸ್ಯಗಳನ್ನೆಲ್ಲಾ ಒಂದು ಸೂತ್ರದಿಂದ ಕಟ್ಟಿ ಹಾಕುವುದು ಸಾಧ್ಯವಲ್ಲ. ತಂದೆ ತಾಯಿಗಳ ರಕ್ತವೇ ನಮ್ಮ ದೇಹದಲ್ಲೆಲ್ಲಾ ಹರಿಯುತ್ತಿದೆಯಷ್ಟೆ. ಇವರು ನಂಟರೆ? ಈಗಿನ ವಿದ್ಯಾವಂತರಾದ ನೀವು ನಿಮ್ಮ ಮುಪ್ಪಿನ ತಂದೆಯೊಡನೆ ಬೆಂಗಳೂರಿನಲ್ಲಿ ಪೇಟೆಯ ಕಡೆಗೆ ಹೊರಟಿರಿ ಎನ್ನಿ. ಆಗ ನಿಮ್ಮ ಮಿತ್ರರೊಬ್ಬರು ಎದುರಿಗೆ ಬಂದು ಕಂಡು ''ಇವರು ಯಾರು?'' ಎಂದು ನಿಮ್ಮ ತಂದೆಯ ಕಡೆಗೆ ತೋರಿಸಿ ಕೇಳಿದಾಗ, ನೀವು ''ನಮ್ಮ ನಂಟರು'' ಎಂದು ಹೇಳಿಬಿಟ್ಟರೆ ಆಗುವ ಅನರ್ಥವನ್ನು ಊಹಿಸುವುದಾದರೂ ಸಾಧ್ಯವೆ? ಕೆಲವು ಮಂದಿ ಸತ್ಪುತ್ರರು ಇಂಥ ಉತ್ತರಗಳನ್ನು ಕೊಟ್ಟ ಮಾತ್ರದಿಂದಲೇ ಎಷ್ಟೋ ಸಂಸಾರಗಳು ಒಡೆದು ಹೋಗಿಲ್ಲವೆ?

''ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ'' ಎಂದು ಹೇಳುವುದು ಗಾದೆಯಲ್ಲಿ ಮಾತ್ರ. ಉಪ್ಪು ರುಚಿಯೆಂದು ಬರಿಯ ಉಪ್ಪನ್ನೇ ಒಂದು ಹಿಡಿಯಷ್ಟು ಮುಕ್ಕಿ; ತಾಯಿ ಬಂಧುವೆಂದು ಆಕೆಯನ್ನು ಬಂಧುವಿನಂತೆಯೇ ಕಂಡು ಕರೆಯಿರಿ. ಆಗ ಗೊತ್ತಾಗುತ್ತದೆ! ಉಪ್ಪು ರುಚಿಗೆ ಮೀರಿದ್ದು; ತಾಯಿ ಬಂಧುಗಳಿಗೆ ಮೀರಿದವಳು.

ತಂದೆ ತಾಯಿಗಳ ಮಾತಾಯಿತು. ಮಕ್ಕಳೊ? ತಂದೆಯನ್ನು ''ನಂಟರು'' ಎಂದಲ್ಲ, ''ನಮ್ಮವರು'' ''ನಮ್ಮ ಮನೆಯ ದೇವರ ಪೂಜೆಯ ಬ್ರಾಹ್ಮಣರು'' ಎಂದು ಕೂಡ ಕರೆದ ಪುಣ್ಯಾತ್ಮರಿರಬಹುದು. ಆದರೆ ಎಂಥ ಕಟುಕನೇ ಆಗಲಿ, ತನ್ನ ಮಗನನ್ನು ''ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಲಿಲ್ಲ'' ಎಂದು ಬೈದಿರಬಹುದೇ ಹೊರತು, ''ನೀನು ನನ್ನ ನಂಟ'' ಎಂದು ಹೇಳಿದ ಪಾಪವನ್ನು ಕಟ್ಟಿಕೊಂಡಿರಲಾರನು.

ಇನ್ನು ಹೆಂಡತಿಯನ್ನು ''ನಂಟಳು'' ಎನ್ನಬಹುದೆ? ಕೇಳಿದ ಕೂಡಲೆ ನೀವೇ ನಕ್ಕುಬಿಡುತ್ತೀರಿ. ವಿಚಾರಮಾಡುವ ಪ್ರಸಂಗವೇ ಇಲ್ಲ. ಬುದ್ಧಿಗಿಂತ ಮೊದಲು ನಿಮ್ಮ ಹೃದಯವೇ ಇಲ್ಲಿ ತೀರ್ಪನ್ನು ಹೇಳಿಬಿಡುತ್ತದೆ.

ಹೋಗಲಿ. ಅಣ್ಣ ತಮ್ಮಂದಿರನ್ನು ನಂಟರೆನ್ನಬಹುದೆ? ''ಹುಟ್ಟ ಹುಟ್ಟುತ ಅಣ್ಣತಮ್ಮಂದಿರು, ಬೆಳೆಯುಬೆಳೆಯುತ ದಾಯಾದಿಗಳು.'' ಅಣ್ಣ ತಮ್ಮಂದಿರು ಗ್ರಹಚಾರ

ತಪ್ಪಿವರೆ ದಾಯಾದಿಗಳಾಗುವರೇ ಹೊರತು ನಂಟರು ಮಾತ್ರ ಎಂದಿಗೂ ಆಗುವುದಿಲ್ಲ. ದಾಯಾದಿಗಳಿಗೂ ನಂಟರಿಗೂ ಇರುವ ವ್ಯತ್ಯಾಸವನ್ನು ನೋಡಿ: ದಾಯಾದಿಗಳಲ್ಲಿ ನಿಮಗೆ ದ್ವೇಷಭಾವ, ನಂಟರಲ್ಲಿ ಉದಾಸೀನಭಾವ. (ಪ್ರೀತಿಯೂ ಕೆಲವು ಕಡೆ ಇದ್ದೀತು; ಆದರೆ ಅದು ಬಹು ವಿರಳ) ನೀವು ಅಪ್ಪಿ ತಪ್ಪಿ ಕ್ರೂರಿಗಳಾದರೆ ದಾಯಾದಿಗಳಿಗೆ ಕೇಡು ಬಯಸುವಿರಿ, ಅವರಿಗೆ ಸಿರಿ ಬಂದರೆ ಕರುಬುವಿರಿ. ಅವರೂ ಹಾಗೆಯೇ ಅಸಲಿಗೆ ಬಡ್ಡಿಯನ್ನು ಸೇರಿಸಿ ನಿಮ್ಮ ಮೇಲೆ ಅವರು ವಿಷ ಕಾರುವರು. ನಂಟರ ವಿಚಾರ ಹಾಗಲ್ಲ, ಅವರ ಮೇಲೆ ನಿಮಗೆ ದ್ವೇಷವಿಲ್ಲ, ಅವರು ಮನೆಗೆ ಬಂದರೆ ಉಪಚಾರ ಮಾಡುವಿರಿ. ಯೋಗಕ್ಷೇಮವನ್ನು ಕೇಳುವಿರಿ. ಯಾವ ದಾಯಾದಿಗಳೇ ಆಗಲಿ, ಪ್ರಾಣ ಹೋಗುವಂತಿದ್ದರೂ ನಿಮ್ಮ ಮನೆಯ ಹೊಸಿಲನ್ನಾದರೂ ಮೆಟ್ಟುವರೆ!

ಹಾಗಾದರೆ ಯಾರು ನಂಟರು?

ತಂದೆ ತಾಯಿಗಳಲ್ಲ, ಹೆಂಡತಿ ಮಕ್ಕಳಲ್ಲ, ಅಣ್ಣ ತಮ್ಮಂದಿರಲ್ಲ, ಅಕ್ಕ ತಂಗಿಯರಲ್ಲ, ಇತರ ರಕ್ತ ಸಂಬಂಧಿಗಳು ನಮಗೆ ನಂಟರು. ತಂದೆಯ ತಂಗಿ ನಿಮ್ಮ ಸೋದರತ್ತೆಯಾಗಬೇಕು. ಹೆಂಡತಿಯ ತಂದೆ ನಿಮ್ಮ ಮಾವನಾಗಬೇಕು. ಇವರು ನಿಮ್ಮ ನಂಟರು. ಹೀಗೆಯೇ ಪ್ರತ್ಯಕ್ಷ ರಕ್ತ ಸಂಬಂಧವುಳ್ಳವರನ್ನು ನಂಟರ ಪಟ್ಟಿಯಿಂದ ತೆಗೆದು ಹಾಕಬೇಕು. ಒಂದು ತಲೆಯಾದರೂ ದೂರದ ಸಂಬಂಧದವರೇ ಬಾಂಧವ್ಯದ ಪೂಜ್ಯತೆಗೆ ಅಧಿಕಾರಿಗಳು.

ಇದರಲ್ಲಿ ಒಂದು ಸ್ವಾರಸ್ಯವುಂಟು. ನಂಟತನದಲ್ಲಿ ನಮಗೆ ಹತ್ತಿರದ ಕಡೆಗೆ ಒಂದು ಎಲ್ಲೆಯಿರುವ ಹಾಗೆ ನಮಗೆ ದೂರದ ಕಡೆಗೆ ಇಲ್ಲ. ದೂರ ದೂರಕ್ಕೆ ಹೋದ ಹಾಗೆಲ್ಲ ಅದೊಂದು ಮಹಾರಣ್ಯ. ಅಲ್ಲಿ ನಮಗೆ ದಾರಿಯೂ ಕಾಣುವುದಿಲ್ಲ, ಕೊನೆಯೂ ಸಿಕ್ಕುವುದಿಲ್ಲ. ಮಾತಾಡಿಸಿದವರೆಲ್ಲರೂ ನಂಟರೇ ಆಗಿಬಿಡುತ್ತಾರೆ. ನಿಮ್ಮ ಚಿಕ್ಕಮ್ಮ - ಎಂದರೆ ನಿಮ್ಮ ತಾಯಿಯ ತಂಗಿ - ನಿಮಗೆ ನಂಟರಷ್ಟೆ. ಅವರ ಗಂಡನೊ? ಆತನ ತಮ್ಮನೊ? ಆ ತಮ್ಮನ ಮಾವನ ಮಗನೊ? ಆ ಮಗನ ಹೆಂಡತಿಯ ಸೋದರತ್ತೆಯ ಗಂಡನೊ? ಎಲ್ಲರೂ ನಂಟರೇ ತಾನೇ! ನಿಮ್ಮ ಮದುವೆಗೆ ಈ ತುದಿಯ ನಂಟನು ಬಂದಿದ್ದನಲ್ಲ, ಆತನನ್ನು ಹಿಂದೆ ನೀವು ನೋಡಿ ಕಾಣಿರಿ, ಹೆಸರನ್ನು ಅರಿಯಿರಿ; ಕಡೆಗೆ ಅಂಥವನೊಬ್ಬನು ಇದ್ದ ಸಂಗತಿ ಕೂಡ ನಿಮಗೆ ಗೊತ್ತಿರಲಿಲ್ಲ. ಆದರೇನು? ''ನೀನು ನನ್ನ ನಂಟನಲ್ಲ'' ಎಂದು ಹೇಳಿ ಆತನನ್ನು ಅಸಡ್ಡೆ ಮಾಡಿದಿರಾ? ಗೌರವವಾಗಿ ಮೊದಲನೆಯ ಪಂಕ್ತಿಗೇ ಮಣೆ ಹಾಕಿ ಕುಳ್ಳಿರಿಸಿ ಔತಣ ಮಾಡಿ ಕಳಿಸಿಕೊಟ್ಟಿರಿ. ಹಾಗೆ ಮಾಡಿದ್ದರಿಂದಲೇ ನಿಮಗೆ ಮಾನ ಬಂದಿತು.

ಮೈಸೂರಿನಲ್ಲಿ ಮನೆ ಮಾಡಿಕೊಂಡಿರುವವರಿಗೆ ಬಾಂಧವ್ಯದ ಸೌಖ್ಯ ನವರಾತ್ರಿಯ ಕಾಲದಲ್ಲಿ ತಕ್ಕಮಟ್ಟಿಗೆ ಮನದಟ್ಟಾಗುತ್ತದೆ. ಮನೆಯ ಯಜಮಾನ ಅಷ್ಟೊಂದು ನೆಮ್ಮದಿಯಾಗಿಲ್ಲದಿದ್ದರೆ ಅದರ ಸೊಗಸು ಇನ್ನೂ ಹೆಚ್ಚು. ರೈಲ್ವೆ ಸ್ಟೇಷನ್ನಿಗೆ ಒಂದು ಗಾಡಿ ಬಂದಿತೆಂದರೆ ಅವನು ಒಂದು ಗೇಣಿನಷ್ಟು ಕುಗ್ಗಿ ಹೋಗುತ್ತಾನೆ. ಅವನ ಮನೆಯಲ್ಲಿ ಒಂದು ಕೊಠಡಿ ಕಿಕ್ಕಿರಿದು ಹೋಗುತ್ತದೆ. ಪಾಪ, ಆ ಗಾಡಿಗಳ ಸಂಖ್ಯೆಗಾದರೂ

ಮಿತಿಯುಂಟೆ? ಹಿಂದೆ ಒಂದು ಬರುತ್ತಿದ್ದ ಕಡೆ ಈಗ ಹತ್ತು. ಘಂಟೆಘಂಟೆಗೂ ಸ್ಪೆಷಲ್ ಗಾಡಿಗಳೇ; ಬೆಂಗಳೂರಿನ ಕಡೆಯಿಂದ, ಅರಸೀಕೆರೆಯ ಕಡೆಯಿಂದ, ಚಾಮರಾಜ ನಗರದ ಕಡೆಯಿಂದ! ಗಾಡಿಗಾಡಿಗೂ ನಂಟರು. ನಿತ್ಯವೂ ಮನೆಯಲ್ಲಿ ಸಮಾರಾಧನೆ. ಒಂದು ನವರಾತ್ರಿ ಕಳೆಯುವ ಹೊತ್ತಿಗೆ ಒಂದು ಅಶ್ವಮೇಧ ಯಾಗವನ್ನು ಕೈಕೊಂಡು ಕೊನೆ ಮುಟ್ಟಿಸಿದಷ್ಟು ಶ್ರಮ.

ಬಾಂಧವ್ಯದಲ್ಲೆಲ್ಲಾ ವಿಚಿತ್ರವಾದದ್ದು ಅಳಿಯ ಮಾವಂದಿರ ಸಂಬಂಧ. ಮಿಕ್ಕ ನಂಟರಲ್ಲೆಲ್ಲಾ ಉದಾಸೀನ ಭಾವವಿದ್ದರೆ, ಅಳಿಯನಿಗೂ ಮಾವನಿಗೂ ಶತ್ರುಭಾವ. ಹಿಂದೆ ಶತ್ರುವಾಗಿ ನಿಮ್ಮಿಂದ ನರಳಿದ್ದವನೇ ಈ ಜನ್ಮದಲ್ಲಿ ಸೇಡು ತೀರಿಸಿಕೊಳ್ಳುವುದಕ್ಕಾಗಿ ನಿಮ್ಮ ಅಳಿಯನಾಗಿಯೋ ಮಾವನಾಗಿಯೋ ಹುಟ್ಟುವನು. ಅಳಿಯಂದಿರೆಲ್ಲರೂ ಕೆಟ್ಟವರು, ಮಾವಂದಿರೆಲ್ಲರೂ ಒಳ್ಳೆಯವರು ಎಂದು ಕೆಲವರು ಹೇಳುತ್ತಾರೆ. ಇದು ಪಕ್ಷಪಾತದ ಮಾತು; ಇದರಲ್ಲಿ ನನಗೆ ನಂಬಿಕೆಯಿಲ್ಲ. ಮಾವ ಒಳ್ಳೆಯವನಾದರೆ ಅಳಿಯ ಕೆಟ್ಟವನು; ಅಳಿಯ ಸಾಧುವಾದರೆ ಮಾವ ಕೆಡುಕಿ - ಹೀಗೆ ಇರುತ್ತದೆ. ಅನೇಕ ವೇಳೆ ಇಬ್ಬರೂ ದುಷ್ಟರಾಗಿದ್ದರೂ ಇರಬಹುದು. ಆದರೆ ಇಬ್ಬರೂ ಒಳ್ಳೆಯವರಾಗಿರುವುದನ್ನು ನೋಡುವುದೂ ಕುದುರೆಯ ಕೊಂಬನ್ನೂ ತರುವುದೂ ಒಂದೇ. ಒಂದು ವೇಳೆ ಇತರರಿಗೆ ಇಬ್ಬರೂ ಒಳ್ಳೆಯವರಾಗಿದ್ದರೂ, ತಮ್ಮೊಳಗೆ ಮಾತ್ರ ಒಬ್ಬನ ತಲೆಯನ್ನು ಕಂಡರೆ ಇನ್ನೊಬ್ಬನಿಗೆ ಆಗುವುದಿಲ್ಲ, ಇದು ಸೃಷ್ಟಿಯ ನಿಯಮವೆಂದು ತೋರುತ್ತದೆ. ಗೋ-ವ್ಯಾಘ್ರ, ಗಜ-ಸಿಂಹ, ತುರಗ-ಮಹಿಷ, ಈ ರೀತಿಯಾಗಿ ಜಾತಿ ವೈರಿಗಳ ಪಟ್ಟಿಯನ್ನು ಕೊಡುವ ಒಂದು ಸಂಸ್ಕೃತ ಪದ್ಯವಿದೆ. ಅದನ್ನು ಬರೆದವರು ಬುದ್ಧಿವಂತರಾಗಿದ್ದರೆ ಶ್ವಶುರ-ಜಾಮತೃ ಎಂದು ಇನ್ನೊಂದು ವರ್ಗವನ್ನೂ ಅಲ್ಲಿ ಸೇರಿಸುತ್ತಿದ್ದರು. ಮದುವೆಗೆ ಮುಂಚೆ ಅಳಿಯನೂ ಮಾವನೂ ಪರಿಚಯಸ್ಥರಾಗಿ ಪ್ರೀತಿಯಿಂದಲೇ ಇದ್ದರೂ, ಅಥವಾ ಈಗ ಹೆಚ್ಚಾಗಿ ನಡೆಯುವಂತೆ ಅಪರಿಚಿತರಾಗಿಯೇ ಇದ್ದರು ಕಾಶೀಯಾತ್ರೆಯ ಸಮಯದಲ್ಲಿ ಮಾವನು ತನ್ನ ಕಣ್ಣೀರನ್ನು ಬೆರಸಿಯೇ ಅಳಿಯನ ಕಾಲನ್ನು ತೊಳೆಯುತ್ತಾನೆ. ಇದಕ್ಕೆ ಈಗಿನ ವರದಕ್ಷಿಣೆಯೇ ಅನೇಕ ಸಂದರ್ಭಗಳಲ್ಲಿ ಕಾರಣವೆನ್ನಬಹುದು; ಆದರೆ ಹಿಂದೆ ಅದು ಇರಲಿಲ್ಲವಷ್ಟೆ; ಈಗಲೂ ಕೆಲವು ಕಡೆಗಳಲ್ಲಿ ಇಲ್ಲವಷ್ಟೆ. ಹಾಗಾದರೆ ವೈರ ಮಾತ್ರ ಏಕೆ ಪೂರ್ವಕಾಲದಿಂದಲೂ ಇದ್ದೇ ಇದೆ?

ನಂಟರು ಎಂದರೆ ಸುಮ್ಮನೆ ಜನರು ಹಿಗ್ಗುತ್ತಾರಲ್ಲ, ಒಂದು ಸೋಜಿಗದ ಸಂಗತಿಯನ್ನು ಯಾರಾದರೂ ಆಲೋಚಿಸಿದ್ದೀರಾ? ನಿಮ್ಮ ನಂಟರಲ್ಲಿ ಎಷ್ಟು ಜನ ನಿಮ್ಮ ಸ್ನೇಹಿತರು? ಅಥವಾ ಆ ಪ್ರಶ್ನೆಯನ್ನೇ ಮಗುಚಿ ಕೇಳುವುದಾದರೆ ನಿಮ್ಮ ಸ್ನೇಹಿತರಲ್ಲಿ ಎಷ್ಟು ಜನ ನಿಮ್ಮ ನಂಟರು? ನಂಟನಾದವನು ಎಂದಿಗೂ ಸ್ನೇಹಿತನಾಗುವುದಿಲ್ಲ; ನಿಜವಾದ ಸ್ನೇಹವು ರಕ್ತಸಂಬಂಧವಿಲ್ಲದವನಲ್ಲಿಯೇ ಹುಟ್ಟುವುದು. ನಿಮ್ಮ ಪ್ರಿಯ ಮಿತ್ರನನ್ನು ಹೆಣ್ಣು ಕೊಟ್ಟೋ ತಂದೋ ನಂಟನನ್ನು ಮಾತ್ರ ಮಾಡಿಕೊಳ್ಳಬೇಡಿ. ಆ ದಿನವೇ ನಿಮ್ಮಿಬ್ಬರ ಸ್ನೇಹಕ್ಕೆ ನೀವು ಎಳ್ಳು ನೀರು ಬಿಟ್ಟ ಹಾಗೆ. ಇದಕ್ಕೆ ಕಾರಣವುಂಟು. ಸ್ನೇಹದ ತಳಹದಿ ಪ್ರೇಮ ಋಜುತ್ವ. ಬಾಂಧವ್ಯದ ತಳಹದಿ ಗೌರವ, ಬಿಗುಮಾನ. ಅದಕ್ಕೂ, ಇದಕ್ಕೂ

ಗಂಟು ಬೀಳುವುದು ಹೇಗೆ? ಸ್ನೇಹಿತನ ಸಂಗಡ ಮುಚ್ಚುಮರೆಯಿಲ್ಲದೆ ನಿಮ್ಮ ಅಂತರಂಗವನ್ನು ಬಿಚ್ಚಿ ಹೇಳುವಂತೆ ನಂಟನ ಸಂಗಡ ಹೇಳಲಾದೀತೆ? ಸ್ನೇಹಿತನೊಂದಿಗೆ ಸರಸವಾಡುವಂತೆ ನಂಟನೊಂದಿಗೆ ಆಡಲಾದೀತೆ? ಯಾವ ಘಳಿಗೆಗೆ ನಗೆ ಹೋಗಿ ಹೊಗೆಯಾಗುವುದೋ ಎಂಬ ಭೀತಿ.

ನಂಟರೆಂದರೆ ಯಾವಾಗಲೂ ಹೆದರಿಕೆ; ನಿಮ್ಮನ್ನು ಎಲ್ಲಿ ಆಡಿಕೊಳ್ಳುವರೋ ಎಂದು. ನಿಮ್ಮ ಹುಳುಕು ಯಾವುದೂ ಅವರಿಗೆ ಕಾಣಿಸದ ಹಾಗೆ ನೀವು ಬಲು ಎಚ್ಚರವಾಗಿರುತ್ತೀರಿ. ನಂಟರು ಮನೆಗೆ ಬಂದರೆ, ಹೊರಕ್ಕೇ ತೆಗೆಯದ ಜಮಖಾನವನ್ನು ಆ ಹೊತ್ತು ಹಾಸಬೇಕು. ಮಿಕ್ಕ ದಿನಗಳಲ್ಲಿ ಹರುಕು ಸೀರೆಯನ್ನು ಉಡುತ್ತಿದ್ದರೂ ಆ ದಿನ ದೊಡ್ಡಂಚಿನ ಸೀರೆಯನ್ನುಟ್ಟುಕೊಂಡೇ ನಿಮ್ಮ ಹೆಂಡತಿ ಊಟಕ್ಕೆ ಬಡಿಸಬೇಕು. ಮಾರನೆಯ ದಿನಕ್ಕೆ ಅಕ್ಕಿಯೇ ಇಲ್ಲದಿದ್ದರೂ, ಅಂಗಡಿಯಲ್ಲಿ ಸಾಲ ವಿಷದಂತೆ ಏರುತ್ತಿದ್ದರೂ, ಏನಾದರೂ ಮಾಡಿ ರವೆ, ಸಕ್ಕರೆ, ಕಾಫಿಪುಡಿ ಇವನ್ನೆಲ್ಲಾ ತಂದು ಅಚ್ಚುಕಟ್ಟಾಗಿ ಫಲಾಹಾರಕ್ಕೆ ಏರ್ಪಾಡಿಸಬೇಕು. ''ಅಟ್ಟಡಿಗೆ ಅಳಿಯನಿಗೆ, ಇಟ್ಟ ನೀರು ಮಾವನಿಗೆ'' ಎಂದು ಹಾಡು ಹೇಳುವ ಹಾಗೆ. ಆಮೇಲೆ ಗೊತ್ತೇ ಇದೆ: ''... ಮುಂದೆ ಬರುವ ಪತ್ರದ ಸಾಲ ಮಗನಿಗೆ.''



ಡ್ರೈವರ್ ಬೇಕಾಗಿದೆ...

– ಸೀ.ಆರ್. ಸತ್ಯ

ನಮ್ಮ ಮನೆಗೂ ನನ್ನ ಆಫೀಸಿಗೂ ದೂರ ಸುಮಾರಾಗಿದೆ. ಸ್ವಚಾಲಿತ ಕಾರಿನಲ್ಲಿ ಅದೂ ಬೆಂಗಳೂರು ರಸ್ತೆಯಲ್ಲಿ ಓಡಾಡೋದು ಸ್ವಲ್ಪ ಕಷ್ಟವಾಗಿಯೇ ತೋರಿತು. ಹೆಸರಿಗೆ 'ರಸ್ತೆ' ಅಂತ ಕರೆದರೂ ವಾಸ್ತವವಾಗಿ ನಮ್ಮ ರೋಡುಗಳೆಲ್ಲಾ ಹಳ್ಳ ಕೊಳ್ಳಗಳೇ! ಅದರಿಂದಾಗಿ ದಕ್ಕಿದ ಕುಕ್ಕಾಟದಿಂದ ಬಂದ ಮೂಳೆ ನೋವು, ಟೂ ವೀಲರ್ ಸಾರಥಿಗಳಿಂದ ಆಗೋ ಬೈಗಳ. ರೋಡ್ ಬ್ಲಾಕ್‌ಗಳು... ಇತ್ಯಾದಿಗಳಿಂದ ಬೇಜಾರಾಗಿ ಒಬ್ಬ ಡ್ರೈವರ್‌ನ ಇಟ್ಕೊಳ್ಳೋದೇ ವಾಸಿ ಅಂತ ಕೆಲವು ಅಭ್ಯರ್ಥಿಗಳನ್ನು ಇಂಟರ್‌ವ್ಯೂ ಮಾಡ್ದೆ. ಅದರ ಸಂಕ್ಷಿಪ್ತ ವರದಿ ಹೀಗಿದೆ:

ಅಭ್ಯರ್ಥಿ ನಂ. 1. ... ಹ್ಹಿ ಹ್ಹಿ ಹ್ಹಿ! ಏನ್ಸಾರ್. ಲೈಸೆನ್ಸ್ ಎಲ್ಲಿಂದ ತರಲೀ ಸಾರ್? ಕಳೆದು ಹೋಗಿ ಎಷ್ಟೋ ದಿನಗಳಾಗ್ಹೋಯ್ತು. ಸಧ್ಯಕ್ಕೆ ನನ್ನ ತಮ್ಮನ ಲೈಸೆನ್ಸ್ ಉಪಯೋಗಿಸ್ತಿದೀನಿ ಸಾರ್. ನಾವಿಬ್ರೂ ನೋಡೋದಕ್ಕೆ ಒಂದೇ ತರಹ ಇದೀವಿ. ಯಾವ ಪೋಲೀಸ್ ಪ್ಯಾದೆಗೆ ಗೊತ್ತಾಗುತ್ತೆ? (ಅಭ್ಯರ್ಥಿ rejected)

ಅಭ್ಯರ್ಥಿ ನಂ. 2: ನಮ್ಮನೆ ನಿಮ್ಮ ಮನೆಯಿಂದ ಸ್ವಲ್ಪ ದೂರ ಆಗ್ಹೋಯ್ತಲ್ಲಾ ಸಾರ್? ಒಂದು ಕೆಲಸ ಮಾಡಿ ಸಾರ್. ನೀವೇ ನನ್ನನ್ನ ನಮ್ಮನೇಲಿ pick up ಮಾಡಿ ಸಂಜೆ ಮೇಲೆ ಮನೇಲಿ drop ಮಾಡ್ಬಿಡಿ, ಮಿಕ್ಕಿದ ಟೈಮ್‌ನಲ್ಲೆಲ್ಲಾ ನಾನೇ ಓಡಿಸ್ತೀನಿ, ಸ್ವಲ್ಪ ಅಡ್ಜಸ್ಟ್ ಮಾಡ್ಕೊಂಡ್ರಾಯ್ತು ಸಾರ್ (ಅಭ್ಯರ್ಥಿ "dropped")

ಅಭ್ಯರ್ಥಿ ನಂ. 3: ಸಾರ್, ನಿಮ್ಮ ಕಂಪೆನಿ ಸಾಫ್ಟ್‌ವೇರೋ ಹಾರ್ಡ್‌ವೇರೋ? ಹಾರ್ಡ್‌ವೇರಾ...? ನಿಮ್ಮ ಮುಖ, ನಿಮ್ಮ ಕಾರು ನೋಡ್ತಾನೇ ನನಗೆ ಗೊತ್ತಾಯ್ತು ಬಿಡಿ. ಈ ಹಾರ್ಡ್‌ವೇರಿನವರ ಕಾರುಗಳ ಕ್ವಾಲಿಟಿ, ಅವರು ಕೊಡೋ ಸಂಬಳ ನಮಗೆ ಸರಿಹೋಗಲ್ಲ ಸಾರ್. (ಅಭ್ಯರ್ಥಿ kicked out!)

ಅಭ್ಯರ್ಥಿ ನಂ. 4: ನಿಮ್ಮ ಕಾರು ಯಾವುದು ಸಾರ್? ಫಿಯಟ್ ಅಂದ್ರಾ?... ಈಗ ಇಂತಹ ಕಾರುಗಳನ್ನೆಲ್ಲಾ ಯಾರು ಸಾರ್ ಓಡಿಸ್ತಾರೆ?... ಅದೂ ಡ್ರೈವರ್ ಇಟ್ಕೊಂಡು? (ಅಭ್ಯರ್ಥಿ thrown out)

ಅಭ್ಯರ್ಥಿ ನಂ. 5: ಸಂಬಳ ಹೇಗೋ ಅಡ್ಜಸ್ಟ್ ಮಾಡ್ಕೋತೀನಿ ಸಾರ್. ಆದರೆ ನಿಮ್ಮ ಕಾರಿನಲ್ಲಿ ಸ್ಟೀರಿಯೋ ಇಲ್ಲಾ... ಸೆಲ್ ಫೋನ್ ಚಾರ್ಜರ್ ಇಲ್ಲಾ... AC ಇಲ್ಲಾ... ಸ್ಟೆಪ್ನೀನೂ ಇಲ್ಲಾ... ಬರೀ ನಾಲ್ಕು ಚಕ್ರಗಳೂ ಸ್ಟೀರಿಂಗ್ ಇದ್ರೆ ಸಾಕೇ ಸಾರ್? ಸಾರಿ ಸಾರ್! (ಅಭ್ಯರ್ಥಿ rejected and kicked put)

ಅಭ್ಯರ್ಥಿ ನಂ. 6: ಸ್ವಲ್ಪ ಕಣ್ಣಿನ ಪ್ರಾಬ್ಲಮ್ ಇದೆ ಸಾರ್. ಟ್ರಾಫಿಕ್ ಜಂಕ್ಷನ್‌ಗಳಲ್ಲಿ ಕೆಂಪು ಬಣ್ಣ ಹಸಿರಾಗಿ ಕಾಣುತ್ತೆ ಹಸಿರು ಕೆಂಪಾಗಿ ಕಾಣುತ್ತೆ. 'ನಿಂತ್ಕೋ', 'ಹೊರಡು'

ಅಂತ ಪಕ್ಕ ಕೂತ್ಕೊಂಡು ನೀವೇ ಹೇಳ್ತಾ ಇರಿ ಸಾರ್. ಮಿಕ್ಕಿದ ಡ್ರೈವಿಂಗ್‌ನೆಲ್ಲಾ ನಾನೇ ಮಾಡ್ತೀನಿ. (ಅಭ್ಯರ್ಥಿ rejected)


ಅಭ್ಯರ್ಥಿ ನಂ. 7: ನೀವು ಹೇಳೋ ಸಂಬಳ ತೀರಾ ಜುಜುಬಿ ಆಗ್ಹೋಯ್ತಲ್ಲಾ ಸಾರ್...? ಹೋಗ್ಲಿ ಬಿಡಿ. ಶನಿವಾರ ಭಾನುವಾರ off ಕೊಟ್ಬಿಡಿ ಸಾರ್. ಬೇರೆ ಯಾವುದಾದ್ರೂ ಟಾಕ್ಸೀನೋ ಲಾರೀನೋ ಓಡಿಸ್ಕೋತೀನಿ (ಅಭ್ಯರ್ಥಿ rejected).

ಅಭ್ಯರ್ಥಿ ನಂ. 8: ಸಾರ್, ನಿಮ್ಮ ಕಾರನ್ನ ನಾನೇ ಪೂರ್ತಿ ಓಡಿಸ್ತೀನಿ. ನನಗೆ ಯಾವ ಸಂಬಳಾನೂ ಬೇಡ. ಯಾವ overtime ಊ ಬೇಡ. ಕಾರನ್ನ ದಿನಾ ತೊಳೆದು ಕ್ಲೀನಾಗಿಟ್ಟಿರ್ತೀನಿ. ಲೈಸೆನ್ಸ್ ಇದೆ. ಪೆಟ್ರೋಲ್‌ನ ದೇವರಾಣೆ ಕದಿಯೋದಿಲ್ಲ. ರಾತ್ರಿ ಬೆಳಿಗ್ಗೆ ಡ್ಯೂಟಿಯಲ್ಲಿರ್ತೀನಿ. ನಿಮ್ಮ ಕಾರನ್ನ ನಿಮ್ಮ ಮನೆಯವರನ್ನ ನೀವು ಎಷ್ಟು ಪ್ರೀತಿಸ್ತೀರೋ, ಅಷ್ಟೇ ನಾನೂ ಪ್ರೀತಿಸ್ತೀನಿ. ಏನೋ ಒಂದಿಷ್ಟು ಹೊತ್ತಿಗ್ಹೊತ್ತಿಗೆ ತಿಂಡಿ, ಕಾಫಿ, ಊಟ ಕೊಟ್ಬುಡಿ ಸಾರ್, ಸಾಕು. ಅಂದ್ಹಾಗೆ, ನಾನು ಕನ್ನಡದವನು ಸಾರ್! (ಅಭ್ಯರ್ಥಿ immediately selected!)

ಅಭ್ಯರ್ಥಿ ನಂ. 8 - ಅಂತಹಾ ಒಳ್ಳೇ ಮನುಷ್ಯ - ಯಾರೂ ಅಂದ್ರಾ? ಅವನು ನಾನೇನೇ!!

ಯಥಾ ಪ್ರಕಾರ ನಾನೇ ನನ್ನ ಕಾರನ್ನ ಓಡಿಸ್ತಿದೀನಿ. ತಿಂಡಿ, ಕಾಫಿ, ಊಟ thanks to my wife ದಿನ ನಿತ್ಯಾ ಸಿಗ್ತಾ ಇದೆ. ಸಂಬಳ ಇಲ್ಲಾ ಅಷ್ಟೆ. ಆದರೆ ಒಂದೇ ಒಂದು ಬೋನಸ್ಸು. ಡ್ರೈವ್ ಮಾಡಿ ಮಾಡಿ ಬೇಜಾರಾದಾಗ ಮನೆಯವರ ಯಜಮಾನ್ತಿಯನ್ನ ಆವಾಗಾವಾಗ ಪ್ರೀತಿ ಮಾಡ್ತಿರಬಹುದು!

★★★



ವಿದ್ಯಮಾನಗಳು

- ಶು.ಶ.

ಕರ್ನಾಟಕ ಹೆಸರಿನಲ್ಲಿಯೇ ನಾಟಕವಿದೆ ಎಂದು ಟೀವಿ ಸುದ್ದಿ ಚಾನಲ್ಲುಗಳ ಮಂದಮತಿಗಳಿಗೆ ಮನವರಿಕೆ ಮಾಡಿದ ಮಹಾನಾಟಕ ಈಗ ಹೆಚ್ಚು ಕಡಿಮೆ ಮುಗಿದಿದೆ. ರಾಜ ಯುವರಾಜರ ಪಟ್ಟಾಭಿಷೇಕ ಸಾಂಗವಾಗಿ ನಡೆದಿದೆ, ಅಷ್ಟಾದಶ ಮಂತ್ರಿಗಳು ತಮ್ಮತಮ್ಮ ಆಸನಗಳನ್ನು ಅಲಂಕರಿಸಿದ್ದಾರೆ. ಒಂದು ರಾತ್ರಿಯಲ್ಲಿ ಮುಗಿಯಬೇಕಾಗಿದ್ದ ನಾಟಕ ರಾಜ್ಯಪಾಲರ ಉದಾರತೆಯಿಂದ, ಶುಭ ನಕ್ಷತ್ರ, ಶುಭಯೋಗ ಶುಭಕರಣ ಮೂರೂ ಹೊಂದುವ ಶುಭಮುಹೂರ್ತಗಳ ಸಕತ್ ಅಭಾವದಿಂದ ಇಂದಿನ ಟೀವಿ ಧಾರಾವಾಹಿಗಳಂತೆಯೇ ಒಂದು ತಿಂಗಳು ನಿಧಾನವಾಗಿ ತೆವಳಿ ಕೊನೆಗೂ ಈಗ ಪರದೆ ಬಿದ್ದಿದೆ.

ಒಂದು ಸಿನಿಮಾ ಹಾಡು, ಅಂಕದ ಪರದೆ ಜಾರಿದ ನಾಟಕವಿನ್ನೂ ಉಳಿದಿಹುದೇ ಎನ್ನುವ ಪ್ರಶ್ನೆಕೇಳುತ್ತಾ ಪ್ರಶ್ನೆಯಲ್ಲೇ ಉತ್ತರವಿದೆ ಎಂದು ಸೂಚಿಸಿತ್ತು. ಆದರೆ ಈಗ ನಾಟಕ ಇನ್ನೂ ಚೂರು ಎಳೆಯುವಂತೆ ಕಾಣುತ್ತಿದೆ. ಧರ್ಮಂ ವಧ ಅಥವಾ ಕುಮಾರ ಪಟ್ಟಾಭಿಷೇಕ ಹೆಸರಿನ ಈ ನಾಟಕವನ್ನು ಕೆಲವರು ದೇವ ಗರ್ವಭಂಗ ಎಂದು ಗೇಲಿ ಮಾಡಿದ್ದರಿಂದ ಆದ ನಷ್ಟವನ್ನು ತುಂಬಲು ಈ ನಿಧಾನವಂತೆ.

★★★

ದೇಶಕ್ಕಾಗಿ ರಣರಂಗದಲ್ಲಿ ಕಾದಾಡುವ ಸೈನಿಕರಲ್ಲಿ ಯಾರು ಯಾರದು ಯಾವ ಯಾವ ಧರ್ಮ? ಈ ಅರವತ್ತು ವರ್ಷ ಯಾರೂ ಈ ಪ್ರಶ್ನೆ ಕೇಳಿರಲಿಲ್ಲ. ಈಗ ಮುಖ್ಯ ನ್ಯಾಯಾಧೀಶರಾಗಿ ನಿವೃತ್ತರಾಗಿ, ರಾಜ್ಯಪಾಲರಾಗಿ ಒಂದೆರಡು ಅವಧಿ ಮುಗಿಸಿದಮೇಲೂ ಇನ್ನೂ ರಾಜಕೀಯ ಮಾಡುತ್ತಿರುವ ಪಳಗಿದ ವಯಸ್ಸಿನವರು ಈಗ ಈ ಪ್ರಶ್ನೆ ಕೇಳಿದ್ದಾರೆ. ಉತ್ತರ ಕೊಡಲೇಬೇಕು ಎಂದು ಈ ಕಡೆ ಹತ್ತು ಅಕ್ಷೋಹಿಣಿ ಇಂತಹ ಪ್ರಶ್ನೆಯನ್ನೂ ಕೇಳುವುದೇ ತಪ್ಪು ಎಂದು ಈ ಕಡೆ ಹತ್ತು ಅಕ್ಷೋಹಿಣಿ ಸೇನೆಗಳ ಜಮಾವಟ್ಟಾಗಿದೆ. ಇಂತಹ ವಿವಾದಗಳಲ್ಲಿ ಸಾಮಾನ್ಯವಾಗಿ ಆಗುವಂತೆ ಇಲ್ಲಿ ಈಗ ಇನ್ನೊಂದು ವಿಚಿತ್ರ ತಿರುವು - ಕೇಂದ್ರದ ಒಬ್ಬ ಮಂತ್ರಿಗಳು ಈ ಪ್ರಶ್ನೆಯನ್ನು ಮೊದಲು ಎತ್ತಿದವರೇ ನಮ್ಮ ಮಹಾನಾಯಕಿ ಎಂದು ಹೇಳಿದ್ದಾರೆ. ನಾನು ಇನ್ನೊಬ್ಬರಿಗಿಂತ ನಾನೇ ಹೆಚ್ಚು ಸೆಕ್ಯುಲರ್ ಎಂದು ಹೇಳಿಕೊಳ್ಳುವುದಕ್ಕೆ ಯಾವಾಗಲೂ ಮಹಾಪೈಪೋಟಿ.

★★★

ಈಗ ಒಂದು ವರ್ಷದ ಹಿಂದೆ ಬೆನ್ನಿಹಿನ್ ಎನ್ನುವ ಮಹಾನುಭಾವ ಜಕ್ಕೂರಿನ ದೊಡ್ಡ ಮೈದಾನದಲ್ಲಿ ಝಂಡಾ ಊರಿದ್ದಾಗ ಅವನ ಅಭಿಮಾನಿಗಳು ಹುಚ್ಚೆದ್ದು ಕುಣಿದರು, ಅವನ ವಿರೋಧಿಗಳು ರೋಷದಿಂದ ಕುದಿದರು. ಈಗ ಅದೇ ಮೈದಾನದಲ್ಲಿ ಬದುಕನ್ನೇ

ಒಂದು ಕಲಾಕುಸುಮವನ್ನಾಗಿ ಮಾಡುವವರ ಮಹಾಮೇಳ. ಚಪ್ಪನ್ನಾರು ದೇಶಗಳ ಮಹಾರಾಜರು, ರಾಷ್ಟ್ರಪತಿಗಳು, ಪ್ರಧಾನಿಗಳು, ಗರ್ವನರುಗಳು, ಮಂತ್ರಿಗಳು, ದೊಡ್ಡ ಅತಿದೊಡ್ಡ ಅಧಿಕಾರಿಗಳು, ಚಿಂತಕರು, ಲೇಖಕರು, ಕಲಾವಿದರು ವಿಶ್ವದ ಎಲ್ಲಾ ಕಡೆಗಳಿಂದ ಬೆಂಗಳೂರಿಗೆ ಬಂದಿರುವುದನ್ನು ನೋಡಿದಾಗ ಏಕಕಾಲದಲ್ಲಿ ಸಂತೋಷವಾಗುತ್ತಿದೆ, ಆಶ್ಚರ್ಯವಾಗುತ್ತಿದೆ, ಜೊತೆಗೆ ಸಂದೇಹಗಳೂ ಏಳುತ್ತಿವೆ.

ಝಗಝಗಿಸುವ ದೀಪಗಳ ನಡುವೆ ಒಂದೇ ವೇದಿಕೆಯಿಂದ ಸಂಗೀತಕಾರರ ಜೊತೆಗೆ ನಾಲ್ಕು ಸಹಸ್ರ ವೀಣೆ, ವೇಣು, ವಯೊಲಿನ್, ಸಾಕ್ಸೋಫೋನ್, ನಾಗಸ್ವರ, ಮೃದಂಗ, ಕಂಜಿರಾ, ಮೋರ್ಸಿಂಗ್ ವಾದ್ಯಗಳು ಮೊಳಗಿದಾಗ ತಿರುವಯ್ಯಾರಿನ ತ್ಯಾಗರಾಜ ಆರಾಧನೆ ಬೆಂಗಳೂರಿಗೆ ಬಂದ ಸಂತೋಷ. ಅದರಲ್ಲೂ ಈ ಕಲಾವಿದರಲ್ಲಿ ಅಪ್ಪ-ಮಗ, ತಾತ-ಮೊಮ್ಮಗ, ಅಜ್ಜಿ-ಅಮ್ಮ-ಮಗಳು ಜೋಡಿಗಳು ಒಟ್ಟಿಗೆ ಹಾಡುತ್ತಾ ತಲೆಮಾರುಗಳ ಅಂತರ ಎನ್ನುವಂತಹುದೇನೂ ಇರಬೇಕಾಗಿಲ್ಲ ಎಂದು ತೋರಿಸುತ್ತಿರುವುದನ್ನು ಕಂಡ ಖುಷಿ. ಒಬ್ಬ ವ್ಯಕ್ತಿಗೆ ಪ್ರಪಂಚದ ಆ ಮೂಲೆಯಿಂದ ಈ ಮೂಲೆಯವರೆಗೂ ಇಷ್ಟೊಂದು ಜನರನ್ನು ಆಕರ್ಷಿಸುವ ಶಕ್ತಿಯಿದೆಯಲ್ಲಾ ಎನ್ನುವ ಆಶ್ಚರ್ಯ. ಧ್ಯಾನ ಮಾಡಲು ಇಷ್ಟು ಅದ್ದೂರಿಯೇ ಎನ್ನುವ ಸಂದೇಹ.

ಈ ಮಹಾಮೇಳಕ್ಕೆ ಬಹುದೂರದಿಂದ ಬಂದಿದ್ದವನೊಬ್ಬ ಹೇಳಿದ: ನನ್ನ ಹೆಸರು ಇದು, ಇದು ಮುಖ್ಯವಲ್ಲ; ನಾನು ಬಂದಿರುವುದು ಈ ದೇಶದಿಂದ, ಇದೂ ಮುಖ್ಯವಲ್ಲ; ನಾನು ಇಲ್ಲಿಗೆ ಬಂದದ್ದು ಏಕೆ, ಇದು ಮುಖ್ಯವಲ್ಲ; ನಾನು ಇಲ್ಲಿ ಸಂತೋಷವಾಗಿದ್ದೇನೆ, ಅದಷ್ಟೇ ಮುಖ್ಯ. ಸಂತೋಷ ಮುಖ್ಯ ನಿಜ. ಆದರೆ ಈ ಸಂತೋಷ ಇಂದಿನ ಮುಕ್ತ ಮಾರುಕಟ್ಟೆಯ ಯುಗದಲ್ಲಿ ತುಂಬಾ ದುಬಾರಿ ಆಗುತ್ತಿರುವಂತಿದೆ.

★★★

ಭಾರತ ಕ್ರಿಕೆಟ್ ತಂಡ ಆಗೊಂದು ಈಗೊಂದು ಪಂದ್ಯಗಳನ್ನು ಗೆಲ್ಲುತ್ತಿತ್ತು. ನಾವು ಪಟಾಕಿ ಹಚ್ಚಿ ಸಿಹಿ ಹಂಚಿ ಖುಷಿ ಪಡುತ್ತಿದ್ದೆವು. ಮುಂದೆ ಒಂದು ಪಂದ್ಯದ ನಂತರ ಇನ್ನೊಂದು ಎನ್ನುವಂತೆ ಸೋಲುತ್ತಿದ್ದಾಗ ಸೋಲುಗೆಲ್ಲುವಾರಿಗಿಲ್ಲ / ಸೋತು ನೀನೇ ಗೆದ್ದೆಯಲ್ಲ ಕವಿನುಡಿಯನ್ನು ನೆನಪಿಸಿಕೊಂಡು ಸಮಾಧಾನ ಪಟ್ಟುಕೊಳ್ಳುತ್ತಿದ್ದೆವು. ಆದರೆ ಈಗ ಪಾಕಿಸ್ತಾನದಲ್ಲಿ ಆಶ್ಚರ್ಯದ ಮೇಲೆ ಆಶ್ಚರ್ಯ ಎನ್ನುವಂತೆ ಐದರಲ್ಲಿ ನಾಲ್ಕೂಮುಕ್ಕಾಲು ಏಕದಿನ ಪಂದ್ಯಗಳಲ್ಲಿ ನಮ್ಮ ಪಂಗಡ ಗೆದ್ದಿದೆ. ಟೀವಿ ಮುಂದೆ ಕುಳಿತು ನೋಡುತ್ತಿರುವವರಿಗೆ ಯುವರಾಜ ಪಠಾಣ ರುದ್ರಪ್ರತಾಪರ ಆರ್ಭಟ ಕಂಡು ಮೈ ನವಿರೇಳುತಿದೆ; ಧೋನಿಯ ಬ್ಯಾಟಿನಿಂದ ಚಿಮ್ಮುವ ರನ್ನುಗಳ ಬುಗ್ಗೆಯ ನೋಡಿ ಕಣ್ಣೊಡೆಯುತಿದೆ, ಮೈ ನಡುಗುತಿದೆ; ಈ ವಿಜಯದ ಕಾರಣ ದ್ರಾವಿಡನ ನಿರ್ಭೀತಿಯೇ ಚಾಪೆಲನ ರಣನೀತಿಯೇ?

★★★

ಸಿಗ್ನಲ್ ಜಂಪ್

- ಸಾಯಿಲಕ್ಷ್ಮಿ .ಎಸ್

ಬೆಂಗಳೂರಿನ ಸೌತ್ ಎಂಡ್ ಸರ್ಕಲ್‌ನಿಂದ ರಾಜಲಕ್ಷ್ಮಿ ಕಲ್ಯಾಣ ಮಂಟಪ ಇಲ್ಲಿಯವರೆಗೆ ಎರಡು ಕಿ.ಮೀ. ವಿಶಾಲ ರಸ್ತೆಯ ಎರಡು ಬದಿಯಲ್ಲೂ, ಕಣ್ಣು ಹಾಯಿಸಿದಲೆಲ್ಲಾ ಹಸಿರು. 18 ಉದ್ಯಾನಗಳು. ಅಲ್ಲಿ ನಡೆಯುವುದೇ ಒಂದು ವಿಶೇಷ ಅನುಭವ. ವಾಹನ ಸವಾರಿಯೂ ಅಪೂರ್ವ ಆನಂದವನ್ನು ಚಾಲಕರಿಗೆ ಕೊಡುತ್ತದೆ. ಇಂತಹ ಬಡಾವಣೆಯಲ್ಲಿರುವವರು ಎಂತಹ ಅದೃಷ್ಟವಂತರು ಎಂದು ಯಾರಿಗಾದರೂ ಅಸೂಯೆ ಮೂಡುತ್ತದೆ. ಈ ಸಮೃದ್ಧ ಜಯನಗರದ ತೃಪ್ತ ಹಿರಿಯ ನಾಗರೀಕ ನಿವಾಸಿ ನಮ್ಮ ಶಂಕರ ಮಾಮ. ಪಾದರಸದಂತೆ ಸದಾ ಚುರುಕಾಗಿ ಏನಾದರೂ ಮಾಡುತ್ತಿರುವುದು ಅವರ ಪ್ರಿಯ ಹವ್ಯಾಸ. ಕಣ್ಣಿನ ಆಪರೇಷನ್ ಆಗಿ, ಈಗ ಸ್ಕೂಟರ್ ಹತ್ತಿ ಹೊರಟು ಬ್ಯಾಂಕ್ ಕೆಲಸ, ಟೆಲಿಫೋನ್ ಬಿಲ್, ನೀರಿನ ಸೇವಾ ಶುಲ್ಕ, ವಿದ್ಯುಚ್ಛಕ್ತಿ ಹಣ, ತರಕಾರಿ, ದೋಬಿ, ತರ ತರ ದೇವರ ದೇವಸ್ಥಾನ ಇವೆಲ್ಲವನ್ನು ಪ್ರತ್ಯೇಕವಾದ ದಿನಗಳಂದು ಗಮನಿಸುವ ಟೈಂ ಟೇಬಲ್ ಹಾಕಿಕೊಂಡು ಯಶಸ್ವಿಯಾಗಿ ನಿಭಾಯಿಸುವರು. ಮಧ್ಯಾಹ್ನ 3ರ ಹೊತ್ತಿಗೆ ಟೊಮೆಟೋ ಬಣ್ಣಕ್ಕೆ ತಿರುಗಿದ ಮುಖದೊಂದಿಗೆ ಬಳಲಿ ಬಂದು, ಮಡದಿಯ ಅಕ್ಕರೆಯ ಬೈಗಳನ್ನು ಸ್ವೀಕರಿಸುವರು. ಇವರ ಪ್ರೇಮ ಕಲಹ ನೋಡುವುದೇ ಒಂದು ಸೊಗಸು.

''ಬಿಸಿಲು. ಮಳೆ ದಂಡ ಆಗಬಾರದಲ್ಲ, ಅದಕ್ಕೆ ಬೆಳಿಗ್ಗೇನೇ ಕೆಲಸ ಇರಲಿ ಬಿಡಲಿ ಹೊರಟು ಬಿಡ್ತಾರೆ ನಿಮ್ಮ ಮಾವ'' ಎಂಬ ಅತ್ತೆಯ ಆಕ್ಷೇಪಣೆ ಇದ್ದದ್ದೇ. ಇದಕ್ಕೆಲ್ಲಾ ಜಗ್ಗುವರೇ ಶಂಕರಮಾಮ. ಒಂದು ಚೆಂದವಾದ ನಗು ಮುಖದಲ್ಲಿ ತುಳುಕಿಸಿ, ವಾತಾವರಣ ತಿಳಿಯಾಗಿಸುವರು.

ಈ ಶಂಕರ ಮಾಮ ಬೆಳಗಿನ ಐದು ಗಂಟೆಗೆ ಎದ್ದರೆ, ರಾತ್ರಿ ಹನ್ನೊಂದಕ್ಕೆ ಹಾಸಿಗೆ ಕಾಣುವುದು. ಸೇಲ್ಸ್ ಉದ್ಯೋಗದಲ್ಲಿದ್ದ ದಿನಗಳಿಗಿಂತ ಅವರು ನಿವೃತ್ತರಾದ ಮೇಲೆ ಬಹಳ ಬಿಜಿ. ಯಾವಾಗಲೂ ಮನೆ ತುಂಬಾ ಓಡಾಡಿಕೊಂಡು, ಬಗೆ ಬಗೆಯ ಕೆಲಸಗಳನ್ನು ಲೀಲಾಜಾಲವಾಗಿ ನಿರ್ವಹಿಸುವುದು ಅವರ ಜಾಯಮಾನ. ಹಾಸಿಗೆ ಸುತ್ತಿ ಎತ್ತಿಡುವುದು, ಪುಳ್ಳೆ ಸೇರಿಸಿ ಒಲೆ ಉರಿಸುವುದು, ಕೈ ತೋಟದ ಬೆಳೆಗಳ ಆರೈಕೆ. ತಮ್ಮ ಮನೆಯಲ್ಲಿ ಮೆಟ್ಟಲಿಲ್ಲದ ಕಾರಣ ಪಕ್ಕದ ಮನೆಯ ಮೂಲಕ ಹತ್ತಿ, ಅಲ್ಲಿಂದ ತಮ್ಮ ಟೆರೇಸ್‌ಗೆ ಸಾಹಸದಿಂದ ಜಿಗಿಯುವುದು, ಹೂ ಕೊಯ್ಯಲು ಹೀಗೆ ಹತ್ತು ಹಲವು. ಇಷ್ಟು ಹೊರಗಿನ ಸುತ್ತಾಟ ಗಂಟೆಗಟ್ಟಲೆ ಪೂಜೆಯೂ ನಿತ್ಯವಿಧಿಗೆ ಸೇರ್ಪಡೆ. ನಾವೆಲ್ಲಾ ಹೆಮ್ಮೆಯಿಂದ ''ಮಾಮ ನಿನ್ನ ನೋಡಿ ಸೂರ್ಯ ನಾಚಬೇಕು'' ಎನ್ನುವೆವು. ಅವರ ಸ್ವಭಾವದ ವೈಶಿಷ್ಟ್ಯ ಎಂದರೆ ಚೌಕಾಶಿ ಮಾಡುವುದು. ಇದ್ದ ಹಣ ಪೋಲು ಮಾಡದೆ, ಮಿತವಾಗಿ ಬಳಸುವುದು. ಬದುಕನ್ನು ಬಹಳ ನಗು ಮುಖದಿಂದ, ಆಶಾವಾದದಿಂದ ನೋಡುವುದು ಅವರ ಸಹಜ ಗುಣ.

ಇಂತಹ ಶಂಕರಮಾಮ ಒಂದು ದಿನ ಸೌತ್ ಎಂಡ್ ಸರ್ಕಲ್ ಸಿಗ್ನಲ್ ದಾಟಿ, ಜಯನಗರದ ಕಡೆ ಸ್ಕೂಟರಲ್ಲಿ ಸವಾರಿ ಬರುತ್ತಿರುವಾಗ ಕೈ ತಡೆದು ನಿಲ್ಲಿಸಿದ ಪೋಲೀಸ್ ಪೇದೆ.

'ನಮಸ್ಕಾರ ಸಾರ್' ಎಂದ.

'ಏನಯ್ಯಾ ಸಮಾಚಾರ' ಎಂದರು ತಮ್ಮ ಸಾವಿರ ಡಾಲರ್ ನಗುವಿನೊಂದಿಗೆ ಮಾಮ.

'ಅದೇ ಸಾರ್, ಗಾಡಿ ಡಾಕ್ಯುಮೆಂಟ್ಸ್ ಚೆಕ್ ಮಾಡಬೇಕಿತ್ತು'.

'ಅದಕ್ಕೇನಯ್ಯಾ, ಎಲ್ಲಾ ಇದೆ. ನೋಡಯ್ಯಾ' ಎಂದ ಮಾಮ ಆರ್.ಸಿ. ಪುಸ್ತಕ, ಲೈಸನ್ಸ್, ಹೊಗೆ ತಪಾಸಣೆ ಸರ್ಟಿಫಿಕೇಟ್, ಇನ್ಸ್ಯೂರೆನ್ಸ್ ದಾಖಲಾತಿ ಎಲ್ಲಾ ಅವನ ಮುಖಕ್ಕೆ ಹಿಡಿದರು.

'ಸರಿ ಸಾರ್, ಎಲ್ಲಾ ಎಷ್ಟು ಅಚ್ಚುಕಟ್ಟಾಗಿ ಇಟ್ಟುಕೊಂಡಿದೀರಿ. ಹಳೇ ಕಾಲದವರು ನೋಡಿ ಎಷ್ಟು ಶಿಸ್ತು.'

ಅವನು ಪಲ್ಲು ಗಿಂಜುವುದು ನೋಡಿ ಸೇಲ್ಸ್ ಮ್ಯಾನೇಜರ್ ಆಗಿದ್ದ ಅನುಭವದ ಹಿನ್ನೆಲೆಯು ಮಾಮನಿಗೆ ಇವನು ಬೇರೆ ಯಾತಕ್ಕೋ ಪೀಠಿಕೆ ಹಾಕುತ್ತಿದ್ದಾನೆ ಎಂದು ಹೊಳೆದುಬಿಟ್ಟಿತು.

'ಬೆಂಗಳೂರು ಸ್ವಂತ ಊರೇನಯ್ಯಾ, ಎಷ್ಟು ಮಕ್ಕಳು? ಬಿಸಿಲಲ್ಲಿ ಡ್ಯೂಟಿ ಮಾಡೋದು ಕಷ್ಟ ಪಾಪ' ಎಂದು ಅನುಕಂಪ ತೋರಿ 'ಬರಲೇನಯ್ಯಾ' ಎಂದರು. ಆ ಪೇದೆಯೂ ನುರಿತವನೇ, ಇಷ್ಟು ಸುಲಭವಾಗಿ ಸಿಕ್ಕ ಮಿಕವನ್ನು ಅವನು ಬಿಡುವನೇ. ಎಲ್ಲವೂ ಸರಿಯಾಗಿದ್ದದ್ದೇ ಅವನಿಗೆ ಸಾಕಷ್ಟು ನಿರಾಶೆ ತಂದೊಡ್ಡಿತ್ತು. ಈ ಜೇನಿನ ಮಾತು ಬೇರೆ.

'ಅದೇ ಸಾರ್, ಡಾಕ್ಯುಮೆಂಟ್ಸ್ ಸರಿ ಇದೆ. ಆದರೆ ನಿಮ್ಮ ಗಾಡಿ ಸಿಗ್ನಲ್ ಜಂಪ್ ಆಯಿತು.'

'ಯಾರಯ್ಯಾ ಹಾಗೆ ಹೇಳಿದ್ದು', ಎಂದರು ಮಾಮ ಖಾರವಾಗಿ.

'ನಮ್ಮ ಸಾಹೇಬ್ರು.'

'ಎಲ್ಲಯ್ಯಾ ಅವರು?'

'ಅವರು ನಂದಾ ಟಾಕೀಸ್ ಹತ್ತಿರ ಇದಾರೆ ಅಲ್ಲಿಂದಲೇ ಪತ್ತೆಮಾಡಿ ಕಳಿಸಿದರು ಸಾರ್ ನನ್ನ.'

'ಏನು ನಿಮ್ಮ ಸಾಹೇಬರಿಗೆ ಅಷ್ಟೊಂದು ದಿವ್ಯ ದೃಷ್ಟೀನೇ. ಕರಿ ಅವರನ್ನ ನಾ ಮಾತಾಡ್ತೀನಿ' ಈ ಚಾಲಾಕಿ ಸ್ಕೂಟರ್ ಚಾಲಕ ದಾರಿಗೆ ಬರುವ ಯಾವ ಲಕ್ಷಣವೂ ಅವನಿಗೆ ಕಾಣಲಿಲ್ಲ. ಕಡೆಗೆ ತಣ್ಣಗಾದ ಆ ಪೇದೆ.

'ಸಾರ್ ಎಷ್ಟು ಇದೆಯೋ ಅಷ್ಟು ಕೊಡಿ' ಎಂದು ಅಂಗಲಾಚಿದ.

'ನೋಡಯ್ಯಾ, ನಾನು ಅಗತ್ಯಕ್ಕಿಂತ ಜಾಸ್ತಿ ದುಡ್ಡು ಇಟ್ಟುಕೊಳ್ಳೋಲ್ಲ. ಈಗ ತಾನೇ ಫೋನ್ ಬಿಲ್ ಕಟ್ಟಿ ಬರ್ತಿದೀನಿ. 1497 ರೂಪಾಯಿ ಆಗಿತ್ತು. 3 ರೂ. ಚಿಲ್ಲರೆ ಇದೆ

ಕೊಡ್ಲಾ' ಎಂದ ಮಾಮ ಜೇಬಿಂದ ಒಂದು ರೂ., ಎರಡು ರೂ. ನಾಣ್ಯ ತೆಗೆದರು. ಆ ಪೋಲೀಸ್‌ನಿಗೆ ಈ ಸಂವಾದದಲ್ಲಿ ಸಾಕಷ್ಟು ತಲೆ ಚಿಟ್ಟಾಗಿತ್ತು. ಆದರೂ ಸೋಲು ಒಪ್ಪದೆ ಕೊಸರಾಡಿದ.

'ಸಾರ್, ಈ ಚಿಲ್ಲರೇಗೆ ಒಂದು ಬಾಳೇಹಣ್ಣು ಬರೋಲ್ಲ, ಇಲ್ಲೇ ನಿಮ್ಮ ಪರಿಚಯದವರು ಯಾರಾದರೂ ಈ ಸಿಗ್ನಲ್‌ನಲ್ಲಿ ಇದ್ದರೆ, ಕೇಳಿ ಇಸುಕೊಂಡು ಕೊಡಿ.'


ಶಂಕರ್ ಮಾಮನ ಪ್ರವರ 'ನೋಡಯ್ಯಾ ನಾನು ಸಾಲ ಕೇಳೋದು ಇಲ್ಲ, ಸಾಲ ಕೊಡೋದು ಇಲ್ಲಾ. ಅದು ಮರ್ಯಾದೇಗೆ ಕಡಿಮೆ. ನಮ್ಮ ದೇಶ ಎಷ್ಟು ಸಾಲದಲ್ಲಿದೆ ನೋಡು. ನಮ್ಮ ಒಬ್ಬೊಬ್ಬರ ತಲೆ ಮೇಲೆ ಈ ಸಾಲದ ಹೊರೆ ಬಡ್ಡಿ ಲೆಕ್ಕ ಹಾಕಿದರೆ ಕುಸಿದೇ ಹೋಗ್ತೀವಿ. ಸಾಲದ ಬಾಳು ಒಂದು ಬಾಳಾ.'

ಹೀಗೆ ಶ್ರಾವಣದ ವರ್ಷಧಾರೆಯಂತೆ ಸುರಿದಿರಲು ಪೋಲೀಸ್ ಕೈ ಮುಗಿದುಬಿಟ್ಟ... ಮಾಮೂಲು ಸಿಗದೆ, ಸಮಯವು ದಂಡವಾಗಿ, ಬೇರೆ ಗಿರಾಕಿಗಳನ್ನು ವಿಚಾರಿಸಿಕೊಳ್ಳಲು ಆಗದ ಪಶ್ಚಾತ್ತಾಪದ ಬೇಗೆಯಲ್ಲಿ ಅವನು ಬೇಯಲಾರಂಭಿಸಿದ.

ತಮ್ಮ ವಾಹನದ ಡಾಕ್ಯುಮೆಂಟನ್ನು ಒಳಗೆ ಜೋಪಾನವಾಗಿರಿಸಿ ಶಂಕರಮಾಮ 'ನಾವೆಲ್ಲಾ ಹಳೇ ಕಾಲದವರು ಬಹಳ ಶಿಸ್ತು, ಬರಲೇನಯ್ಯಾ' ಎಂದು ಸ್ಕೂಟರ್ ಸ್ಟಾರ್ಟ್ ಮಾಡಿದರು. ಅವನು 'ಇನ್ನೆಂದೂ ನೀವು ಬರುವುದು ಬೇಡಾ, ನಿಮ್ಮಂತಹ ಖಾಲಿ ಜೇಬಿನವರ ಸಹವಾಸವೇ ಬೇಡಾ', ಮನದಲ್ಲೇ ಬೈದುಕೊಂಡ. ಮನೆಗೆ ಬಂದ ಮಾವ ಪತ್ನಿಗೆ ಹೇಳಿದರೆ 'ಹಂಪ್ ಇಳಿದಿದ್ದು ಜಂಪ್ ಅಂದ ಭೂಪ, ನಾ ಬಿಡ್ತೀನಾ.'

'ನನ್ನೊಬ್ಬಳನ್ನ ಬಿಟ್ಟು ನೀವು ಉಳಿದ ಎಲ್ಲರನ್ನು ಬಿಡೋಕೆ ಆಗುತ್ತಾ' ಎಂದು ರೇಗಿಸಿದರು ಮೋಹದ ಮಡದಿ.

★★★



"ಏನಾರ ಮಾಡ್ಕೊಂಡ್ ಹಾಳಾಗಿ ಹೋಗಿ ಅಂದ್ರೆ...!"

– ಬೇಲೂರು ರಾಮಮೂರ್ತಿ

ಕಪಿನೀಪತೀದು ಒಂಥರಾ ಸ್ವಭಾವ... ಏನೂಂದ್ರೆ ಅಡಿಪಾಯ ಇಲ್ದೆ ಮನೆ ಕಟ್ಟಿದ್ರು ಅನ್ನೋ ಹಾಗೆ ಮಾತಾಡೋದು. ಹೀಗೆ ಮಾತಾಡೀ ಮಾತಾಡೀ ಹೆಂಡ್ತಿ ಅಲಮೇಲು ಕೈಲಿ ಸಖತ್ ಉಗಿಸ್ಕೊಂಡಿದ್ರೂ, ಬುದ್ಧಿ ಬಂದಿಲ್ಲ. ಹೆಂಡ್ತಿ ಹತ್ರ ಬೈಸ್ಕೊಂಡೂ ಬುದ್ಧಿ ಕಲ್ತ್‌ಕೊಳ್ದಿರೋನು ಅಂದ್ರೆ ಬಹುಶಃ ಕಪಿನೀಪತಿ ಒಬ್ಬನೇ ಏನೋ.

ಕಪನೀಪತಿ ಅವತ್ತು ಕಟ್ಟೆಗೆ ಓಡೋಡಿ ಬಂದ. ಬಂದೋನು ಗರುಡಗಂಬದ ತರಹ ನಿಂತ. ನಿಂತೋನು ಅಲ್ಲಿದ್ದವರನ್ನು ಕಂಡು ನಕ್ಕ. ನಕ್ಕೋನು ಕಚ್ಚೆಪಂಚೆ ಸರಿ ಮಾಡ್ಕೊಂಡು ಕೂತ. ಕೂತೋನು ಸೊಂಟಕ್ಕೆ ಕೈ ಹಾಕಿ ನಶ್ಯದ ಡಬ್ಬಿ ತೆಗೆದ. ತೆಗೆದೋನು ತಾನೊಂದು ಚಿಟಿಕೆ ಮೂಗಿಗೇರಿಸಿ ಡಬ್ಬಿನ ಮಿಕ್ಕವರ ಮುಂದೆ ಹಿಡಿದ. ಕುಂಟಸೀನ "ಇದರಲ್ಲೇ ಆಗೋಯ್ತು ನಿಂದು. ತಡವಾಗಿ ಬಂದೋನು ಏನಾದ್ರೂ ತಿಂಡಿ ತರಬಾರ್ದಾ" ಅಂದ. ಕಪಿನೀಪತಿ ಸರಿಯಾಗಿ ಕೂತ್ಕೊಂಡು ಕುಂಟಸೀನ, ತರ್ಲೆ ಪಾಪಣ್ಣ, ಸುಳ್ಳ ಸುಬ್ಬ, ಢೋಂಗಿ ರಾಜನ ಕಡೆ ನೋಡಿ "ಏನಾರಾ ಮಾಡ್ಕೊಂಡು ಹಾಳಾಗಿ ಹೋಗಿ" ಅಂತ ಅಂದ್ರೆ ಏನ್ರೋ ಅಂತ ಕೇಳಿದ. ಕೇಳಿದ್ರಾ, ಇದನ್ನೆ ಅಡಿಪಾಯ ಇಲ್ದೆ ಮನೆ ಕಟ್ಟೋ ಬುದ್ಧಿ ಅಂದಿದ್ದು. ಕುಂಟಸೀನ ಕೈ ಎತ್ತಿ ಕಪಿನೀಪತಿಯ ಬೆತ್ತಲೆ ಬೆನ್ನಿನ ಮೇಲೆ ರಾಚಿ "ನೀನು ಪ್ರೈಮರಿ ಸ್ಕೂಲಲ್ಲಿ ಓದುವಾಗ, ನಿನಗೆ ಮೇಷ್ಟ್ರು who said this to whom and when ಅಂತ ಪ್ರಶ್ನೆ ಕೇಳ್ತಿದ್ರಾ, ಅದಕ್ಕೆ ನೀನು ಉತ್ತರ ಹೇಳ್ತಿದ್ಯಾ" ಅಂತ ಕೇಳಿದ. ಕಪಿನೀಪತಿ ಬೆನ್ನು ಸವರಿಕೊಂಡು "ನನ ಮಕ್ಳಾ ಇನ್‌ಮೇಲೆ ಕಟ್ಟೆಗೆ ಬರುವಾಗ ಬೆಚ್ಚಗೆ ಬಟ್ಟೆ ಹಾಕ್ಕೊಂಡು ಬರ್ತೀನಿ ಈ ಕುಂಟಸೀನನ ಕೈ ಬೆರಳ ಗುರುತೇನಾದ್ರೂ ಅವಳ ಕಣ್ಣಿಗೆ ಬಿದ್ರೆ ಅದಕ್ಕೊಂದು ಕಥೆ ಕಟ್ತಾಳೆ" ಅಂದ. ಮತ್ತೆ "ಈ ವಾಕ್ಯವನ್ನು ಯಾರು ಯಾರಿಗೆ, ಯಾವ ಸಂದರ್ಭದಲ್ಲಿ ಹೇಳಿದರು ಅಂತ ಹೇಳೋ" ಅಂದ ಸುಳ್ಳಸುಬ್ಬ. ಆಗ ಕಪಿನೀಪತಿ "ನನ್ ಹೆಂಡ್ತಿ ಹೇಳಿದ್ದು ಕಣ್ರೋ. ನಂಗೆ ಹೇಳಿದ್ದು ಕಣ್ರೋ... ಕಟ್ಟೆಗೆ ಹೋಗ್ಲಾ ಅಂತ ಕೇಳಿದಾಗ ಹೇಳಿದ್ದು ಕಣ್ರೋ. ಈಗ ಸ್ವಲ್ಪ ಹೊತ್ತಿಗೆ ಮುಂಚೆ ಹೇಳಿದ್ದು ಕಣ್ರೋ" ಅಂದ. ಅದಕ್ಕೆ ಡೋಂಗಿ ರಾಜ "ಸರಿ ನಿನಗೆ ಪರವಾನಗಿ ಕೊಟ್ಟಿದಾಳಲ್ಲ ಎಲೆ ಹಾಕ್ಕೊ' ಅಂದು ಬೆತ್ತಲೆ ಮಂಡಿ ಸವರಿಕೊಂಡ.

ಕಪಿನೀಪತಿಗೆ ಈಚೀಚೆಗೆ ಬದುಕಿನಲ್ಲಿ ಸುಖವಾದ ಕ್ಷಣ ಅಂದ್ರೆ ಕಟ್ಟೆಗೆ ಭೇಟಿ, ರೆಮ್ಮಿ ಅಂಡ್ ಷೋ, ಒಂದಿಷ್ಟು ನಶ್ಯ, ಒಂದಿಷ್ಟು ಎಲೆಯಡಿಕೆ ಹಾಗೂ ಅಪರೂಪಕ್ಕೊಮ್ಮೆ

ಹೆಂಡ್ತಿ ಇಲ್ದೆ ಇದ್ದಾಗ ಕದ್ದೂ ಮುಚ್ಚಿ ನೋಡಿದ ಎಂಟಿವಿ, ಎಫ್‌ಟಿವಿ ದೃಶ್ಯಾವಳಿಗಳ ವರ್ಣನೆ. ಆದರೆ ಹೆಂಡತಿ ಇದಕ್ಕೂ ಸಂಚಕಾರ ಮಾಡ್ತಾಳೆ. ಹೇಗೋ ಅವಳನ್ನ ಒಲಿಸಿ ಕಟ್ಟೆಗೆ ಓಡಿ ಬರ್ತಾನೆ ಕಪಿನೀಪತಿ.

ಅವತ್ತು ಸೊಂಟದ ಇನ್ನೊಂದು ಭಾಗದಿಂದ ಐವತ್ತು ರೂಪಾಯಿ ನೋಟು ಎಳೆದು ಪಕೋಡ, ಚೌಚೌ ತರಿಸಿದ. ಆನಂದವಾಗಿ ಕಾಲ ಕಳೀತಿದೆ ಅನ್ನುವಾಗ ಅಲಮೇಲು ಸವಾರಿ ಬರಬೇಕೇ. ''ಏನ್ರೀ ನಾ ಹೇಳಿದ್ದೇನು ನೀವು ಮಾಡಿದ್ದೇನು'' ಅಂದಳು. ''ನೀನೇ ಹೇಳಿದ್ಯಲ್ಲೇ ಏನಾರ ಮಾಡ್ಕೊಳಿ'' ಅಂತ ಅಂದು ಸೊಂಟ ಕೆರೆದ ಕಪಿನೀಪತಿ. ''ನಾ ಹೇಳಿದ ಕೆಲಸವೆಲ್ಲ ಮಾಡಿಯಾದ ಮೇಲೆ ಏನಾರಾ ಮಾಡ್ಕೊಳಿ ಅಂತ ನಾನು ಅಂದಿದ್ದು ನೀವು ನೋಡಿದ್ರೆ ಹೇಳಿದ ಕೆಲಸ ಬಿಟ್ಟು ಇಲ್ಲಿ ಬಂದಿದೀರಾ'' ಅಂದು ಕಣ್ಣರಳಿಸಿ ಮಿಕ್ಕವರ ಕಡೆ ನೋಡಿ ''ಇವರನ್ನ ಯಾಕ್ರೋ ಆಟಕ್ಕೆ ಸೇರಿಸ್ಕೊಂಡ್ರಿ'' ಅಂತ ಕೇಳಿದಳು. ತರ್ಲೆ ಪಾಪಣ್ಣ, ಸುಳ್ಳು ಸುಬ್ಬ, ಕುಂಟಸೀನ ಹೆಹೆಹೆ ಅಂದರು. ಡೋಂಗಿ ರಾಜ ಮಾತ್ರ ''ಕಪಿನೀಗೆ ಏನು ಕೆಲಸ ಹೇಳಿದ್ರಿ ಮೇಡಂ ಅವನಿಗೆ ನಾವೂ ಸಹಾಯ ಮಾಡ್ತೀವಿ ಬಿಡಿ'' ಅಂದ. ''ಹೌದಾ ಹಾಗಿದ್ರೆ ಎಲ್ರೂ ನಮ್ಮನೆಗೆ ನಡೀರಿ'' ಅಂದು ಹುಕುಮಿಸಿ ನಡೆದಳು ಅಲಮೇಲು. ಕಪಿನೀಪತಿ ಡೋಂಗಿ ರಾಜನಿಗೆ ಯಾಕೋ ಹಾಗೆ ಹೇಳ್ದೆ ಅಂದ. ಯಾಕೋ ಅಂತ ಕೇಳಿದರೆ ಕಪಿನೀಪತಿ ''ಅವಳು ಹೇಳಿದ ಕೆಲಸ ಏನು ಗೊತ್ತಾ ಇಪ್ಪತ್‌ಮಣ ಸೌದೆ ತಂದು ನೀಟಾಗಿ ಒಡೆದು ಜೋಡಿಸೋದು. ಅಟ್ಟನ ಕ್ಲೀನ್ ಮಾಡೋದು, ಹಿತ್ತಲಕಡೆ ಇರೋ ಒಂದು ರಾಶಿ ಕೆಲಸಾನ ಮುಗಿಸೋದು, ಕೊಟ್ಟಿಗೇನ ಕ್ಲೀನ್ ಮಾಡಿ ಸಗಣೀನ ತಗೊಂಡ್ ಹೋಗಿ ತಿಪ್ಪೆಗೆ ಹಾಕಿ ಬರೊದು. ತಿಪ್ಪೆನ ಕ್ಲೀನ್ ಮಾಡೋದು ಇಷ್ಟೇ ಸಾಲದು ಅಂತ ಅಟ್ಟದ ಮೇಲಿಂದ ಇಳಿಸಿದ ಪಾತ್ರೆಗಳನ್ನ ನೀಟಾಗಿ ತೊಳೆದು ಒರೆಸಿ ಇಡೋದು'' ಅಂದ. ಎಲ್ರೂ ಬಿಟ್ಟ ಕಣ್ಣು ಬಿಟ್ಟಂತೆ, ಬಿಟ್ಟ ಬಾಯಿ ಬಿಟ್ಟಂತೆ ನಿಂತಿದ್ದರು. ಕಪಿನೀಪತಿ ಹೀಗಂದಿದ್ದೇ ತಡ ಕುಂಟಸೀನ, ಸುಳ್ಳಸುಬ್ಬ, ತರ್ಲೆ ಪಾಪಣ್ಣ ಎಲ್ಲ ಡೋಂಗಿ ರಾಜನ ಬೆನ್‌ಮೇಲೆ ಸಖತ್ತಾಗಿ ಇಕ್ಕಿದರು. ''ನನ ಮಗನೇ ನಾವು ಸಹಾಯ ಮಾಡ್ತೀವಿ ಅಂದ್ಯಲ್ಲ ಈಗ ನೋಡು'' ಅಂದರು. ಡೋಂಗಿ ರಾಜ ನೋವು ನುಂಗಿ ''ನಂಗೇನ್ರೋ ಗೊತ್ತು'' ಅಂದ.

ಕಪಿನೀಪತಿ ನಶ್ಯ ಮುಕ್ಕಿ ನಡೀರಪ್ಪ ಇಲ್ದಿದ್ರೆ ಅವಳು ಹೊಡ್ಕೊಂಡ್‌ಬಿಡ್ತಾಳೆ ಅಂದು ಹೆಜ್ಜೆ ಹಾಕಿದ.

ಅವತ್ತೇ ಅವರೆಲ್ಲ ಒಂದು ರೆಸಲ್ಯೂಷನ್ ಪಾಸ್ ಮಾಡಿದರು. ಏನಂದ್ರೆ ಕಪಿನೀಪತೀನ ಕಟ್ಟೆ ಮೆಂಬರ್‌ಷಿಪ್‌ನಿಂದ ಡಿಸ್‌ಮಿಸ್ ಮಾಡಬೇಕು ಅಂತ.

★★★

ತುಂತುರು

- ದಂನಳ

- ಈ ವರ್ಷ ಭಾರತ ರತ್ನ ಪ್ರಶಸ್ತಿಗೆ ಯಾರು ಅರ್ಹರು ಸಿಗಲಿಲ್ಲ ಎಂದರೆ ಮುಂದಿನ ವರ್ಷ ಯಾರು ಸಿಗಲು ಸಾಧ್ಯ?
- ಯುವ ಭಾರತ ಧೋನಿಯಂತೆ ಕನಸು ಕಾಣುತ್ತದೆ. ಆದರೆ ದ್ರಾವಿಡ್‌ನಂತೆ ಆಡುತ್ತದೆ... ಅಂದರೆ ರಕ್ಷಣಾತ್ಮಕವಾಗಿ.
- ಅತ್ಯಂತ ಶಕ್ತಿಶಾಲಿ ಭಾರತೀಯ ಅಧಿಕಾರದಲ್ಲಿಲ್ಲ. ಹಾಗೆಯೇ ಅಧಿಕಾರದ ಅತ್ಯಂತ ಶಕ್ತಿಶಾಲಿ ಪೀಠದಲ್ಲಿರುವ ವ್ಯಕ್ತಿ ಅತ್ಯಂತ ಶಕ್ತಿಶಾಲಿ ಭಾರತೀಯನಲ್ಲ.
- ರೋಗಿಗಳು ವೈದ್ಯರಿಲ್ಲದೆ ಬದುಕಬಹುದು. ಆದರೆ ವೈದ್ಯರು ರೋಗಿಗಳಿಲ್ಲದೆ ಬದುಕಲಾರರು.
- ಮೀನಿಗೆ ನೀರಿನಲ್ಲಿ ನಂಬಿಕೆ ಇದೆಯೆ? (ನಿಮಗೆ ದೇವರಲ್ಲಿ ನಂಬಿಕೆ ಇದೆಯೆ? ಎಂದು ಯಾರನ್ನೋ ಕೇಳಿದಾಗ)
- ಸ್ಟಾರ್‌ಪ್ಲಸ್‌ಗೆ ಅಮಿತಾಬ್ ಬಚ್ಚನ್ ಹೇಗೋ ಆಸ್ತಾ ಚಾನೆಲ್‌ಗೆ ಬಾಬಾ ರಾಮದೇವ್.
- ಭಾರತದಲ್ಲಿ ಎಲ್ಲದಕ್ಕೂ ಹಲವಾರು ಜೀವಗಳಿರುತ್ತವೆ, ಹಗರಣಗಳಿಗೂ ಸಹ.
- ಯಾವುದೇ ಕಾರಣಕ್ಕಾಗಿ ಬೋಗಿಗಳಾಗಬೇಡಿ. ಇಂಜಿನ್‌ಗಳಾಗಿ.
- ಓ! ರಾಜನೆ, ಈ ಭಿಕ್ಷಾಪಾತ್ರೆಯನ್ನು ತುಂಬಿಸಲು ಯಾರಿಂದಲೂ ಸಾಧ್ಯವಿಲ್ಲ. ನಿನ್ನಿಂದ ಅಷ್ಟೇ ಅಲ್ಲ, ಶ್ರೀಮಂತರಲ್ಲೇ ಅತಿ ಶ್ರೀಮಂತನಿಗೂ ಸಹ ಸಾಧ್ಯವಿಲ್ಲ. ಇದು ಮಾಮೂಲಿ ಭಿಕ್ಷಾ ಪಾತ್ರೆಯಲ್ಲ. ಇದು ತನ್ನ ಆಸೆಗಳನ್ನು ಪೂರೈಸಿಕೊಳ್ಳಲಾಗದೆ ಅತೃಪ್ತಿಯಿಂದಲೇ ಸತ್ತ ವ್ಯಕ್ತಿಯ ತಲೆ ಬುರುಡೆ.
- ಧರ್ಮಶ್ರದ್ಧೆ ಕುರಿತಂತೆ ಲೇವಡಿ ಮಾಡುವುದು ಹಾಸ್ಯದ ವಿಷಯವಾಗುವದಿಲ್ಲ.
- ದೇವರಿಗೂ ದೇವಮಾನವರಿಗೂ ಇರುವ ವ್ಯತ್ಯಾಸ: ದೇವರು ತನ್ನ ಹುಟ್ಟಿದ ಹಬ್ಬ, ಭೇಟಿಗಳ ಬಗ್ಗೆ ಜಾಹೀರಾತು ನೀಡಬೇಕಿಲ್ಲ, ಕಟ್ ಔಟ್ ನಿಲ್ಲಿಸಬೇಕಿಲ್ಲ, ಇನ್ನಷ್ಟು ಮಾಹಿತಿಗಾಗಿ ಉಚಿತ ಕರೆಗಳನ್ನು ಮಾಡಬಹುದಾದ ಫೋನ್ ನಂಬರ್ ನೀಡಬೇಕಿಲ್ಲ...

★★★

ಉಕ್ತಿ - ಚಾಟೂಕ್ತಿ

- ಎನ್. ರಾಮನಾಥ್

ಫೆಬ್ರವರಿ ಹದಿನಾಲ್ಕರಂದು ಪ್ರೇಮಿಗಳ ದಿನಾಚರಣೆ - ಸುದ್ದಿ

ಎನಿತಚ್ಚರಿಯು ಎರಡನೆ ಮಾಸದಿ ಪ್ರೇಮಿಗಳ ದಿನಾಚರಣೆ
ಎಣಿಸಿದ ರೀತಿಯೊಳ್ ನವಮಾಸಾಂತ್ಯದಿ ಶಿಶು ದಿನಾಚರಣೆ

★★★

ಕುಮಾರಸ್ವಾಮಿ ಪರಿವಾರ ದಳದಿಂದ ಸಸ್ಪೆಂಡ್ - ದೇವೇಗೌಡ

ನಾಟಕ ನಡೆದ್ರೈತೆ ಜೀವನ ನಾಟಕ ಸಾಗ್ರೈತೆ
ಹೆದ್ದಾರಿಯೊಳು ಆನೆಯು ಸಾಗಿರೆ ಸೊಣಗವು ಬೊಗಳ್ತೈತೆ

★★★

ಬೆಂಗಳೂರಿನ ಆಸ್ಪತ್ರೆಯಲ್ಲಿ ರೌಡಿಗಳಿಂದ ಭೀಕರ ಕೊಲೆ - ಸುದ್ದಿ

ರೌಡಿಗಳಿಂದ ಇಂತಹ ಕಾರ್ಯವು ನಡೆಯಬಾರದಿತ್ತು
ವೈದ್ಯರ ಮಾರಕ ಶಕ್ತಿಯ ಬಗ್ಗೆ ನಂಬಿಕೆ ಇರಬೇಕಿತ್ತು

★★★

ಜಕ್ಕೂರು ವಿಮಾನ ನಿಲ್ದಾಣದಲ್ಲಿ ಆರ್ಟ್ ಆಫ್ ಲಿವಿಂಗ್‌ನವರ ಅಮೋಘ ಕಾರ್ಯಕ್ರಮ - ಸುದ್ದಿ

ನಲಿ ಎಲ್ಲಿ ನೋಡಿದರು ಜಾತಿಧರ್ಮಗಳ ಹಾರಾಟ
ನಲಿ ಎಲ್ಲಿ ನೋಡಿದರು ಜಾತಿಧರ್ಮಗಳ ಹಾರಾಟ
ವೈಭವಕಿಲ್ಲಿ ಆದ್ಯತೆಪೀಠ, ಬಡವಗೆ ತಪ್ಪದ ಪರದಾಟ

★★★

ಸೋಲಿಗನಿಂದ ಮತ್ತೊಂದು ಸಾಧನೆ - ಸುದ್ದಿ

ಜಾತ್ಯತೀತದಿ ಬಹಿರಂಗದಲಿ ಜಾತಿಯುಲ್ಲೇಖವು ತರವಲ್ಲವೆನ್ನುವರು
ಮುಚ್ಚಿಡಬೇಕಾದ್ದೆಲ್ಲವ ಬಿಚ್ಚುತ ಸಾಮಾನ್ಯಮನದಿ ವಿಷ ಬಿತ್ತುವರು

★★★

ಮೊದಲನೇ ತರಗತಿಯಿಂದ ಐಚ್ಛಿಕ ಇಂಗ್ಲಿಷ್ - ವಿದ್ಯಾ ಇಲಾಖೆ

ಅಮೆರಿಕಮ್ಮಳ ದತ್ತುವಾಗಲಿನ್ನಾವುದೆ ಮಾರ್ಗವು ಸರಿಯಲ್ಲ
ಕನ್ನಡಿಗನ ಬುದ್ಧಿಯು ಅಂತು ಅನ್ಯಭಾಷೆಯಿಂ ಸರಿಯುವುದಿಲ್ಲ

★★★

ನಿತ್ಯ ಪಾರಾಯಣರು

- ಎಚ್. ಗೋಪಾಲಕೃಷ್ಣ

ದರಿದ್ರ ನರಾಯಣರು
ನಾವು ದರಿದ್ರ ನರಾಯಣರು
ರಾಜಕೀಯ ಧುರೀಣರು
ಇಟ್ಟಿರುವರು ನಮ್ಮನ್ನು ಬಲಹೀನರು

ದರಿದ್ರ ನರಾಯಣರು
ನಾವು ದರಿದ್ರ ನರಾಯಣರು
ಪುಢಾರಿಗಳಿಗೆ ನಾವೇ
ಮೊದಲು ಸಿಕ್ಕುವ ಬಕರಾಗಳು

ದರಿದ್ರ ನರಾಯಣರು
ನಾವು ದರಿದ್ರ ನರಾಯಣರು
ಭೂಗಳ್ಳರಿಗೆ, ಭೂ ಮಾಲೀಕರಿಗೆ
ಎಂದಿಗೂ ಬೇಕಾದ ಪರದೇಶಿಗಳು

ದರಿದ್ರ ನರಾಯಣರು
ನಾವು ದರಿದ್ರ ನರಾಯಣರು
ಚುನಾವಣೆ ಬಂದಾಗ
ನಾವು ಮತ ಬ್ಯಾಂಕುಗಳು

ದರಿದ್ರ ನರಾಯಣರು
ನಾವು ದರಿದ್ರ ನರಾಯಣರು
ನಾವೇ ಪ್ರಯೋಗ ಪಶುಗಳು
ವಿಷವುಣಿಸಲು ನಾವೇ ಸರಿ ಎಂಬುವರು

ದರಿದ್ರ ನರಾಯಣರು
ನಾವು ದರಿದ್ರ ನರಾಯಣರು
ಹಗಲೆಲ್ಲಾ ದುಡಿದು
ರಾತ್ರಿ ಕುಡಿದು ಬೀಳುವವರು

ದರಿದ್ರ ನರಾಯಣರು
ನಾವು ದರಿದ್ರ ನರಾಯಣರು
ಬಾವುಟ ಹಿಡಿದು ಮುಂದೆ ನಡೆವರು
ಲಾಠಿ ಏಟು ತಿಂದು
ಕಣ್ಣೀರು ಹರಿಸುವವರು...

ದರಿದ್ರ ನರಾಯಣರು
ನಾವು ದರಿದ್ರ ನರಾಯಣರು
ಎಲ್ಲರಿಗೂ ನಾವೇ ಏಣಿಗಳು
ಅಟ್ಟವೇರಿದ ನಂತರ ದೂಡಿಸಿಕೊಳ್ಳುವರು

ದರಿದ್ರ ನರಾಯಣರು
ನಾವು ದರಿದ್ರ ನರಾಯಣರು

ಸಜಾ ಶಿಬಿರ

– ಶಂಸಿ

ಸತ್ಯಾಗ್ರಹವೆಂಬ ಪರಿಕಲ್ಪನೆ ಚಾಲ್ತಿಗೆ ಬಂದದ್ದೂ, ಅದು ಪ್ರಚಾರ ಪಡೆದದ್ದೂ ಮಹಾತ್ಮ ಗಾಂಧೀಜಿಯಿಂದ. ದರೆ ಸತ್ಯಾಗ್ರಹ ಮಾಡುವುದು ಹುಟ್ಟರಿವಿನಿಂದ ಬರುವ ಪ್ರವೃತ್ತಿ ಎಂಬುದಕ್ಕೆ, ಸಿಟ್ಟು ಬಂದಾಗ ಹಸುಗೂಸುಗಳು ತಾಯಿಯ ಮೊಲೆ ಹಾಲು ಕುಡಿಯಲು, ಹಾಗೂ ಮುದ್ದಿನ ಸಾಕು ಪ್ರಾಣಿಗಳು ಆಹಾರ ಸೇವಿಸಲು ನಿರಾಕರಿಸುವುದೇ ನಿದರ್ಶನ. ಗಾಂಧೀಜಿಯೇನೋ ಅಸಹಕಾರ ಚಳುವಳಿ, ಉಪವಾಸ ಮುಷ್ಕರಗಳ ಮೂಲಕ ಸತ್ಯಾಗ್ರಹಕ್ಕೆ ಘನತೆ - ಗೌರವಗಳನ್ನು ತಂದು ಕೊಟ್ಟರು; ಬೇಡಿಕೆಯನ್ನು ಪೂರೈಸಿಕೊಳ್ಳಲು ಅದೊಂದು ಯಶಸ್ವೀ ಮಾರ್ಗವೆಂದೂ ಸಾಬೀತು ಪಡಿಸಿದರು. ಆದರೆ ಇತ್ತೀಚೆಗೆ ಸತ್ಯಾಗ್ರಹದ ಗುಣಮಟ್ಟ ಇಳಿದು ಹೋಗಿದೆ; ಅದು ಸಾಕಷ್ಟು ಫಲಪ್ರದವಾಗುತ್ತಿಲ್ಲ.

ಸತ್ಯಾಗ್ರಹಕ್ಕೆ ಎಷ್ಟೊಂದು ಹೆಸರುಗಳು! ಎಷ್ಟೊಂದು ಕಾರಣಗಳು! ಎಷ್ಟೊಂದು ಸ್ವರೂಪಗಳು! ಪ್ರತಿಭಟನೆ, ಮೆರವಣಿಗೆ, ಮುಷ್ಕರ, ಚಳವಳಿ - ಇವೆಲ್ಲ ಸತ್ಯಾಗ್ರಹಗಳೇ, 'ದೇವನೊಬ್ಬ, ನಾಮ ಹಲವು' ಎಂಬಂತೆ. ನಿಜವಾದ ಅರ್ಥದಲ್ಲಿ ಸತ್ಯಾಗ್ರಹವೆಂದರೆ 'ಪ್ಯಾಸಿವ್ ರೆಸಿಸ್ಟೆನ್ಸ್'; ಎಂದರೆ ಸಾತ್ವಿಕವಾಗಿ, ಅಹಿಂಸಾತ್ಮಕಾಗಿ ವಿರೋಧಿಸುವುದು, ಪ್ರತಿಭಟಿಸುವುದು. ಆದರೆ ಈಗ ಸತ್ಯಾಗ್ರಹವೆಂಬುದು ಹಿಂಸೆ, ಲೂಟಿಗಳಿಗೆ ಸಮಾನಾರ್ಥಕ ಪದವೆನಿಸಿದೆ.

ಸತ್ಯಾಗ್ರಹಕ್ಕೆ ಕಾರಣಗಳು? ಸತ್ಯಾಗ್ರಹಿಗಳನ್ನೇ ಕೇಳಿ ತಿಳಿದುಕೊಳ್ಳಬೇಕು. ಆದರೆ ಎಷ್ಟೋ ಸಲ ಮುಷ್ಕರ ನಡೆಸಲೇಬೇಕೆಂಬ ಛಲವೇ ಮುಷ್ಕರಕ್ಕೆ ಕಾರಣವಾಗುವುದುಂಟು. ಅಂತೆಯೇ ಒಂದು ಮುಷ್ಕರದ ವಿರೋಧವಾಗಿ ಇನ್ನೊಂದು ಪ್ರತಿ (?) ಮುಷ್ಕರವನ್ನು ನಡೆಸುವುದೂ ಉಂಟು.

ಅಂಗಡಿ ಬೋರ್ಡುಗಳಿಗೆ ಮಾನ್ಯರ ಮುಖಗಳಿಗೆ ಕಪ್ಪು ಮಸಿ ಬಳಿಯುವುದು, ಕತ್ತೆ ಸವಾರಿ ಮಾಡುವುದು, ತಮಟೆ ಬಡಿಯುತ್ತ ಸಾಗುವುದು, ಮೊದಲಾದವು ಹೇಗೆ ಮುಷ್ಕರದ ಕೆಲವು ವಿಧಗಳೋ. (ಊಟಮಾಡಿ ಹೊಟ್ಟೆ ತುಂಬಿಸಿಕೊಂಡು ಬಂದು ಆವರೆಗೆ ಉಪವಾಸ ಕುಳಿತವರಿಗೆ ಕೋ ಕೊಟ್ಟು ಊಟಕ್ಕೆ ಕಳಿಸುವ) ಸರದಿ ಉಪವಾಸ ಮುಷ್ಕರ ಹಾಗೂ (ಬಾಡಿಗೆ ಶಾಮಿಯಾನಾದ ಅಡಿ ಹೆಂಡತಿ ಮಕ್ಕಳೊಂದಿಗೆ) ದಿನವಿಡೀ ಹರಟೆ ಹೊಡೆಯುತ್ತ, ಬೀಡಿ ಸಿಗರೇಟು ಸೇದುತ್ತ, ತಾಂಬೂಲ ಮೆಲ್ಲುತ್ತ, ಕುರುಕು ತಿಂಡಿ ತಿನ್ನುತ್ತ ಕುಳಿತಿರುವ ಧರಣಿ ಮುಷ್ಕರ - ಇವೂ ಸತ್ಯಾಗ್ರಹಗಳೇ. ಈಚೆಗಂತೂ ಖಿನ್ನಥದ ಓಟಾಠಫಾರರಾದ ಟಾವಾಳ್ ಗಾನರಾಜ್ ಅವರ ಚಳವಳಿಗೆ ಅನೇಕ ಹೊಸ

ರೂಪಗಳನ್ನು ನೀಡಿದ್ದಾರೆ. (ಅರೆ) ನಗ್ನ ಮೆರವಣಿಗೆಯು ಚಳವಳಿಯ 'ಸ್ಟೇಟ್-ಆಫ್-ಆರ್ಟ್' ರೂಪವಾಗಿದೆ.

ಸದ್ಯದ ಅನೇಕ ಮುಷ್ಕರಗಳು ಸಾರ್ವಜನಿಕರ ದೈನಂದಿನ ಜೀವನಕ್ಕೆ ಬದುಕಿಗೆ ತೊಂದರೆಯನ್ನಷ್ಟೇ ಉಂಟು ಮಾಡುತ್ತವೆ. ರಾಮಸ್ವಾಮಿ ಸರ್ಕಲ್‌ನಿಂದ ಸಹಕಾರ ಭವನದತ್ತ ಪ್ರತಿಭಟನಕಾರರ ಒಂದು ತಂಡವೂ, ಸಹಕಾರ ಭವನದಿಂದ ರಾಮಸ್ವಾಮಿ ಸರ್ಕಲ್‌ನತ್ತ ಇನ್ನೊಂದು ತಂಡವೂ ಘೋಷಣೆಗಳನ್ನು ಕೂಗುತ್ತ ಒಂದೇ ವೇಳೆಯಲ್ಲಿ ಮೆರವಣಿಗೆ ನಡೆಸಿದರೆ, ಜನರಿಗೆ, ವಾಹನಗಳಿಗೆ ನಡೆಯಲು, ಸಾಗಲು ಬೇರೆ ಮೂರನೆಯ ದಾರಿಯೆಲ್ಲಿ? ಈ ದೃಷ್ಟಿಯಿಂದ ಎಲ್ಲ ಡಬ್ಬಲ್ ರಸ್ತೆಗಳನ್ನು ತ್ರಿಬ್ಬಲ್ ರಸ್ತೆಗಳನ್ನಾಗಿ ಪರಿವರ್ತಿಸುವತ್ತ ಮೂಡದವರು ಆಲೋಚಿಸಲಿ ಎಂದು ವಿನಯವಾಗಿ ಸೂಚಿಸುತ್ತೇನೆ. (ಚತುಷ್ಪಥ ರಸ್ತೆಗಳಾದರೆ ಇನ್ನೂ ಒಳ್ಳೆಯದು) ಎಲ್ಲ ಮುಷ್ಕರ ತಂಡದವರೂ ತಮ್ಮ ಮನವಿಯನ್ನು ಅರ್ಪಿಸಲು ಕೊನೆಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿಗೆ ಹೋಗುವುದರಿಂದ, ಆ ಕಚೇರಿಯ ಸುತ್ತಮುತ್ತ ದಿನಾ ಕುಂಭಮೇಳ ಜಾತ್ರೆ.

ಕೆಲವು ಸಲ ಚಳವಳಿಗಳು ಹಾಸ್ಯಾಸ್ಪದವಾಗಿ, ವಿಫಲವಾಗಿ ಕೊನೆಗೊಳ್ಳುವುದುಂಟು. ಕಳೆದ ಒಂದು ವರ್ಷದಿಂದ ಈಚೆಗೆ ಒಟ್ಟು ಹದಿನಾರು ಸಲ 'ಆಜೀವ ಉಪವಾಸ' ಮುಷ್ಕರ ನಡೆಸಿ, ಇನ್ನೂ ಜೀವಂತವಾಗಿರುವ ಶ್ರೀ ಎಕ್ಸ್‌ವೈಜ಼ಡ್ (ಹೆಸರು ಬದಲಾಯಿಸಿದೆ) ಕನ್ನಡ ಅಂಕಿ-ಅಕ್ಷರಗಳೇ ಅಂಗಡಿ ಫಲಕಗಳಲ್ಲಿರಬೇಕು ಎಂದು ಹತ್ತು ವರ್ಷಗಳಿಂದ ನಿರಂತರ ಹೋರಾಡುತ್ತಲೇ ಬಂದಿದ್ದರೂ, ಝಗಮಗಿಸುವ ಇಂಗ್ಲೀಷ್ ಬೋರ್ಡ್‌ಗಳಿಂದ ಕಂಗೊಳಿಸುತ್ತಿರುವ ದೇವರಾಜ್ ಅರಸ್ ರಸ್ತೆಯೇ - ಈ ಮಾತಿಗೆ ನಿದರ್ಶನ.

ಇಂತೆಂಬ ಪರಿಸ್ಥಿತಿಯಲ್ಲಿ ಸತ್ಯಾಗ್ರಹದ ಗುಣಮಟ್ಟವನ್ನು ಏರಿಸುವ ದೃಷ್ಟಿಯಿಂದ, ಜನರಲ್ಲಿ ಸತ್ಯಾಗ್ರಹದ ಬಗೆಗಿನ ಜಾಗೃತಿ ಮೂಡಿಸುವ ಇಚ್ಛೆಯಿಂದ ಒಂದು ವಾರದ ಅವಧಿಯ ಸ(ತ್ಯಾಗ್ರಹ) ಜಾ(ಗೃತಿ) ಶಿಬಿರವೊಂದನ್ನು ಹಮ್ಮಿಕೊಳ್ಳಲಾಗಿದ್ದು, ಅದರಲ್ಲಿ ಭಾಗವಹಿಸಬಯಸುವವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕೆಲವೇ ಸೀಟ್‌ಗಳಿರುವುದರಿಂದ ಮೊದಲ ಅರ್ಜಿದಾರರಿಗೆ ಮೊದಲ ಆದ್ಯತೆ ಅರ್ಜಿ ಈ ಕೆಳಗಿನ ನಮೂನೆಯಲ್ಲಿರಬೇಕು:


ಅರ್ಜಿದಾರನ ಹೆಸರು	:	
ಪೂರ್ಣ ವಿಳಾಸ	:	
ಮನೆಯಲ್ಲಿ ಏನಾಗಿದ್ದೀರಿ?	:	ಮಗ/ಮಗಳು/ತಂದೆ/ತಾಯಿ/ಅತ್ತೆ/ ಸೊಸೆ/ಅಳಿಯ/ಮಾವ.....

ವೃತ್ತಿಯಲ್ಲಿ ಏನಾಗಿದ್ದೀರಿ?	:	ಶಿಕ್ಷಕ/ಡಾಕ್ಟರ್/ಇಂಜಿನಿಯರ್/ಕ್ಲರ್ಕ್/ಜವಾನ....
ಸತ್ಯಾಗ್ರಹದಲ್ಲಿ ಹಿಂದೆ ಭಾಗಿಯಾಗಿದ್ದರೆ	:	ಅನುಭವ (ಐದಾರು ವಾಕ್ಯಗಳಲ್ಲಿ ಸಂಕ್ಷಿಪ್ತವಾಗಿ)

ಸಹಿ

ಸೂಚನೆ:

1. ಶಿಬಿರದ ಏಳು ದಿನಗಳ ಅವಧಿಯಲ್ಲಿ, ಶಿಬಿರ ಹಮ್ಮಿಕೊಂಡವರ ವಿರುದ್ಧವಾಗಿ ಯಾವುದೇ ಚಳವಳಿ ನಡೆಸುವುದಿಲ್ಲವೆಂಬ, ಸ್ವ ಹಸ್ತಾಕ್ಷರದ, ಸಹಿಯಿರುವ ಮುಚ್ಚಳಿಕೆ ಪತ್ರವನ್ನು ಅರ್ಜಿಗೆ ಲಗತ್ತಿಸತಕ್ಕದ್ದು.
2. ಗಮನಿಸಿ: ಹಾರೋತಿ ಪುಡಾರಿಗಳಿಗಾಗಿ, ಮಸಾಲೆ ದೋಸೆ ಸಾಹಿತಿಗಳಿಗಾಗಿ ವಿಶೇಷ ತರಬೇತಿ ಕಾರ್ಯಕ್ರಮವಿದೆ.
3. ನಿರುದ್ಯೋಗಿಗಳೂ ಅರ್ಜಿ ಸಲ್ಲಿಸಬಹುದು.
4. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ದೂ.ವಾ.ಸಂಖ್ಯೆ......



ಚೂಡಿದಾರ್ ಸೆಟ್ಟು

– ಮಣಿ ಬೆಂಗಳೂರು

ಅವನೆಂದ:

ಪ್ರಿಯೆ...
ನಿನ್ನ ಸುಂದರ
ಮುಖದಲ್ಲಿ
ಮಂದ ಹಾಸವ
ಇಟ್ಟು.

ತುಟಿಯಂಚಿನಲಿ
ಕಿರುನಗೆಯ
ಹರಿಯ
ಬಿಟ್ಟು.

ಗಿಳಿ ಹಸಿರಿನ
ರೇಷಿಮೆಯ
ಸೀರೆಯನು
ಉಟ್ಟು.

ಅದಕೆ ಒಪ್ಪುವ
ಸೊಗಸಾದ
ಕಂಚುಕವ
ತೊಟ್ಟು.

ಕೇಶ ರಾಶಿಯನು
ಹೆಗಲ ಮೇಲೆ
ಇಳಿಯ
ಬಿಟ್ಟು.

ಮೆದುವಾಗಿ
ಅಡಿಯ ಮೇಲೆ
ಅಡಿಯನ್ನು
ಇಟ್ಟು.

ಬಳುಕುತ್ತ
ಬರುತಿರಲು
ನಾಚಿಕೆ ಪಟ್ಟು.

ನೋಡುವೆನು
ಕಣ್ಣಲ್ಲಿ
ಕಣ್ಣನ್ನು
ಇಟ್ಟು.

ಅವಳೆಂದಳು:

ಪ್ರಿಯ....
ಅಯ್ಯೋ! ಅದು
ಹಳೆಯದಾಯ್ತು
ಅವನೆಲ್ಲ ಮರೆತು
ಬಿಟ್ಟು.

ತಂದುಕೊಡಿ
ನನಗೊಂದು
ಚುಡಿದಾರ್
ಸೆಟ್ಟು.

ಕುದುರೆ ಸವಾರಿ

- ಧೃತಿ

ಕೆಲ ವರ್ಷಗಳ ಹಿಂದೆ ನಾನು ಮತ್ತು ನನ್ನ ಗಂಡ ಇಬ್ಬರೂ ಬದರೀ ನಾಥ ಮತ್ತು ಕೇದಾರ ನಾಥಗಳಿಗೆ ಯಾತ್ರೆ ಮಾಡಿದ್ದೆವು. ಕೇದಾರದ ಯಾತ್ರೆ ಬಹು ಪ್ರಯಾಸಕರವೆಂಬುದು ಎಲ್ಲರೂ ತಿಳಿದ ವಿಷಯವೇ. 'ರಾಂ ಬಾಡ'ದ ವರೆಗೆ ಮಾತ್ರ ವಾಹನದ ಸೌಲಭ್ಯ ಸಿಗುವುದು. ಅನಂತರ ನಡೆದು ಹೋಗಬಹುದು. ಇನ್ನೇನು ಮುದುಕರಾಗುತ್ತಿದ್ದಾರೆನಿಸಿಕೊಳ್ಳುವಂತಿದ್ದ ನಮ್ಮಿಂದ ಈ ಕೆಲಸ ಸಾಧ್ಯವಿರಲಿಲ್ಲ. ಆಸಕ್ತರನ್ನು ಚಟ್ಟದ ರೀತಿಯ ಆಕೃತಿ (ಝೂಲ. ಝೋಲಿ)ಯಲ್ಲಿ ಕುಳ್ಳಿರಿಸಿಕೊಂಡು ಅದರ ಎರಡು ಕೊನೆಗಳನ್ನು ಇಬ್ಬರು ಸದೃಢ ಮನುಷ್ಯರು ತಮ್ಮ ತಮ್ಮ ಹೆಗಲುಗಳ ಮೇಲೆ ಇರಿಸಿಕೊಂಡು ಹೊತ್ತೊಯ್ಯುವ ವ್ಯವಸ್ಥೆಯೇನೋ ಇತ್ತು. ಆದರೆ ಇದು ನಮಗೆ ಇಷ್ಟವಿರಲಿಲ್ಲ. ಲಿಂಗಾಯಿತರ ಹೆಣದಂತೆ ಕಾಣುತ್ತೇವೆವೆಂಬುದೊಂದೇ ಕಾರಣವಲ್ಲ. ಮನುಷ್ಯರ ಮೇಲೆ ಸವಾರಿ ಮಾಡುವುದು ನಮಗೆ ಉಚಿತವೆನಿಸಲಿಲ್ಲ. ನಾವು ತೀರಾ ಅಶಕ್ತರೇನೂ ಆಗಿರಲಿಲ್ಲ. ಅಲ್ಲದೆ ಹಾಗೆ ಹೋಗಿ ಬಂದವರ ಕಥೆ ಕೇಳಿದ ಮೇಲಂತೂ ನಾವು ಆ ಚಟ್ಟದ ಯೋಚನೆಯನ್ನೇ ಮಾಡಲಿಲ್ಲ. ಆ ಝೋಲಿಯಲ್ಲಿ ಸ್ವಲ್ಪವೇ ಕಾಲು ಚಾಚಿ ಕುಳಿತುಕೊಳ್ಳಬೇಕಂತೆ. ಪೂರ್ತಿ ಕಾಲು ಚಾಚಬಾರದಂತೆ. ಒಮ್ಮೆ ಹೇಗೆ ಕುಳಿತಿರುತ್ತೇವೆಯೋ ಹಾಗೆಯೇ ಕುಳಿತಿರಬೇಕಂತೆ. ಕಾಲು ನೋವಾದರೆ ಅತ್ತ ಇತ್ತ ಸರಿಸಬಾರದಂತೆ ಹಾಗೆ ಮಾಡಿದರೆ ಹೊತ್ತವರಿಗೆ ಹೆಗಲು ನೋವಾಗುವುದಂತೆ. ಅತ್ತ ಇತ್ತ ಸುತ್ತ ಮುತ್ತ ಪ್ರಕೃತಿ ತನ್ನ ಸೌಂದರ್ಯವನ್ನು ವೈಭವೋಪೇತವಾಗಿ ಪ್ರದರ್ಶಿಸುತ್ತಿರುವಾಗ ನಾವು ಕೊಂಚವೂ ತಲೆಯಲುಗಿಸದೆ ಹಾಗೆಯೇ ವೀಕ್ಷಿಸಬೇಕಂತೆ. ಮುಗಿಲು ಮುಟ್ಟುವ ಶಿಬಿರ; ಹಾಲಿನಂತೆ ಬೆಳ್ಳಗೆ ಮೇಲಿನಿಂದ ಕೆಳಗೆ ಹರಿಯುತ್ತಿರುವ ಮಂದಾಕಿನಿ; ಗಭೀರ ಹಾಗೂ ಗಂಭೀರ ಭಾವವನ್ನು ಬಿಂಬಿಸುತ್ತಿರುವ ಕಣಿವೆಗಳು; ಇವುಗಳತ್ತ ತಲೆಯಾಡಿಸದೆ ಬರಿಯ ಕಣ್ಣುಗಳಿಂದ ಹೇಗೆ ನೋಡಲು ಸಾಧ್ಯ! 'ಲಿಂಗಾಯತರ ಹೆಣದಂತೆ' ಎಂದು ಹುಡುಗಾಟಿಕೆಯಿಂದ ಅಂದುಕೊಂಡಿದ್ದನ್ನು ಇಷ್ಟು ಗಂಭೀರವಾಗಿ ಪಾಲಿಸಲೂ ಬೇಕಾಗಬಹುದು ಎಂದು ಗೊತ್ತಾದದ್ದು ಆಗಲೇ.

ಮೂರನೆಯ ಮಾಧ್ಯಮವಾದ 'ಕುದುರೆ' ಇದ್ದುದರಿಂದ ಅದನ್ನೇ ಆರಿಸಿಕೊಂಡಾಯಿತು. 'ಘೋಡಾ ಚಾಹಿಯೇ ಕ್ಯಾ' ಎಂದು ಕೇಳುತ್ತಾ ಒಬ್ಬ ರಾವುತ ನಾವಿದ್ದಲ್ಲಿಗೇ ಬಂದ. ನಮ್ಮಿಬ್ಬರಿಗೂ ಒಂದೊಂದು ಕುದುರೆ ತೋರಿಸಿ ಗೋಣಿತಟ್ಟು ಹಾಸಿ 'ಬೈಠೀಯೆ' ಅಂದ. ಕುದುರೆ ಹತ್ತಲು ಸಹಾಯ ಮಾಡಿದ. ಸವಾರಿ ಆರಂಭವಾಯಿತು. ಸ್ವಲ್ಪ ದೂರ ಸಾಗಿದ ಕೂಡಲೇ ನಮಗೆ ಮುಖ ಪೆಚ್ಚಾಯಿತು. ಆಹಾ!


ನಮಗೆ ಸಿಕ್ಕ ಕುದುರೆಗಳೋ! ಅದೇನು ನಮ್ಮ ಮುಖ ನೋಡಿಯೇ ಈ ಮುಖಕ್ಕೆ ಇಂಥ ಕುದುರೆಗಳೇ ಸಾಕು ಎಂದು ಆ ವ್ಯಾಪಾರಿ ತೀರ್ಮಾನಿಸಿಬಿಟ್ಟಿದ್ದನೇನೋ; ಆ ಕುದುರೆಗಳು 'ತುರಗ' ವೇಗದಲ್ಲಿ ಚಲಿಸುವುದರ ಬದಲು 'ಗಜಗಮನ'ವನ್ನು ಸ್ವೀಕರಿಸಿಬಿಟ್ಟಿದ್ದವು. ನಾವು ನೋಡುತ್ತಲೇ ಇದ್ದೇವೆ; ಹಿಂದಿನಿಂದ ಒಂದೊಂದಾಗಿ ಎಲ್ಲ ಕುದುರೆಗಳೂ ನಮ್ಮನ್ನು ದಾಟಿ ಮುಂದೆ ಹೋಗುತ್ತಿವೆ. ಮೇಲೇರುತ್ತಾ ಏರುತ್ತಾ ಅವುಗಳ ನಡಿಗೆ ಎಷ್ಟು ನಿಧಾನವಾಯಿತೆಂದರೆ ಬೇರೆ ಬಸ್‌ಗಳಲ್ಲಿ ಬಂದವರೂ ಕೂಡಾ ನಮ್ಮನ್ನು ದಾಟಿ ಮುಂದೆ ಹೋದರು. ಮುಂದೆ ಹೋದ ಕೆಲವರು ಹಿಂದೆ ತಿರುಗಿ ನಮ್ಮ ಮುಖ ನೋಡಿ ನಕ್ಕರು. ಇದರಿಂದ ಬೇಸರಗೊಂಡ ನನ್ನ ಗಂಡ 'ಕ್ಯಾ ಹುವಾಹೈ ಘೋಡೇಕೊ? ಠೀಕ್ ತೊ ಹೈ' ಎಂದು ಕೇಳಿದರು. 'ಸಬ್ ಠೀಕ್ ಹೈ ಸಾಬ್' ಎನ್ನುತ್ತಾ ಜೋರಾಗಿ ಕುದುರೆಯ ಬೆನ್ನಮೇಲೆ ಚಾಟಿ ಬೀಸಿದ ಆ ರಾವುತ. ಆಗ ಅದು ಒಂದೆರಡು ಹೆಜ್ಜೆ ಬೇಗ ಬೇಗ ಹೋಯಿತು. ಮತ್ತೆ ಅದೇ ಗಜಗಮನನೇ. ನಾವೇನಾದರೂ ಆ ಕುದುರೆಯ ಬಗ್ಗೆ ಕೇಳಿದರೆ ಅಥವಾ ಆಕ್ಷೇಪಿಸಿದರೆ ಅವನು ಛಟೀರೆಂದು ಚಾಟಿ ಬೀಸುತ್ತಿದ್ದನಾದ್ದರಿಂದ ನಾನೇ 'ಹೋಗಲಿ ಬಿಡಪ್ಪ; ಅವು ನಿಧಾನವಾಗೇ ಹೋಗಲಿ' ಎಂದು ಹಿಂದಿಯಲ್ಲಿ ಹೇಳಿದೆ. ನಾವು ಕುಳಿತಿದ್ದ ಎರಡು ಕುದುರೆಗಳನ್ನು ಒಬ್ಬನೇ ನಡೆಸುತ್ತಿದ್ದ ಆ ರಾವುಕ ಆ ಕುದುರೆಗಳಿಗೆ ಎಷ್ಟು ಚೆನ್ನಾಗಿ ತರಬೇತಿ ಕೊಟ್ಟಿದ್ದನೆಂದರೆ ನಾನು ಕುಳಿತಿದ್ದ ಕುದುರೆ ಸ್ವಲ್ಪವೂ ಮುಂದೆ ಹೋಗದೆ ನನ್ನ ಗಂಡ ಕುಳಿತಿದ್ದ ಮುಂದಿನ ಕುದುರೆಯ ವೇಗಕ್ಕೆ ಅನುಸಾರವಾಗಿ ತನ್ನದನ್ನೂ ಅಳವಡಿಸಿಕೊಳ್ಳುತ್ತಿತ್ತು - ಗಂಡನನ್ನು ಹಿಂಬಾಲಿಸುವ ಪತಿವ್ರತೆಯಂತೆ. ನಾನು ಚುಚು ಎನ್ನುತ್ತಾ ನನ್ನ ಕುದುರೆಯಾದರೂ ಮುಂದೆ ಹೋಗಲಿ ಎಂದು ಹುರಿದುಂಬಿಸಿದೆ. ರಾವುತ ಚಾಟಿ ಬೀಸಿ ಮತ್ತೆ ಅದನ್ನು ಹಿಂದಕ್ಕೇ ಅಟ್ಟಿದ. ಹಿಂದಿನ ಕಾಲದಲ್ಲೂ ಗಂಡಸರು ಹೀಗೆ ಚಾಟಿ ಬೀಸಿಯೇ ತಮ್ಮ ಪತ್ನಿಯರನ್ನು ಪತಿವ್ರತೆಯರನ್ನಾಗಿ ಮಾಡುತ್ತಿದ್ದರೇನೋ ಎಂದುಕೊಂಡೆ. ಅದನ್ನು ಬಾಯಿಬಿಟ್ಟು ಹೇಳಿ ಗಂಡನ ಕೈಲಿ ಬೈಸಿಕೊಳ್ಳಲು ಇಷ್ಟಪಡಲಿಲ್ಲ.

ಮೇಲೆ ಮೇಲೆ ಏರುತ್ತಾ ಹೋದಂತೆ ಸವಾರು ಎಷ್ಟು ಕಠಿಣವಾಗಿದೆ ಎಂಬುದರ ಅರಿವಾಗುತ್ತಾ ಬಂತು. ಕುದುರೆಗಳೋ! ರಸ್ತೆಯಂಚಿನಲ್ಲೇ ಹಟ ಹಿಡಿದಂತೆ ನಡೆಯುತ್ತಿವೆ. ಕೆಳಗೆ ನೋಡಿದರೆ ಪ್ರಪಾತ. ರಸ್ತೆಯ ತಿರುವಿನಲ್ಲಿ ಕುದುರೆಗಳು ಪ್ರಪಾತವನ್ನು ಲೆಕ್ಕಿಸದೆ ನಿರ್ಭಯವಾಗಿ ಕಾಲೂರಿದರೆ ನಮಗೆ ಭಯ. ಕುದುರೆ ಅಕಸ್ಮಾತ್ತಾಗಿ ಕಾಲು ಜಾರಿದರೆ ನಾವು ಮೂಳೆ ಮುರಿದುಕೊಳ್ಳುವುದು ಖಚಿತ. ನಾವು ಭಯದಿಂದ ಕೂಗಿಕೊಂಡರೆ ಅವನು ಚಾವಟಿ ಬೀಸುತ್ತಾನೆ. ನಮ್ಮಿಂದ ಅವಕ್ಕೆ ಪೆಟ್ಟು. ನಾವು ಜೋರಾಗಿ ಕೂಗಿದಷ್ಟೂ ಅವಕ್ಕೆ ಜೋರು ಪೆಟ್ಟು. ಜೋರಾಗಿ ಪೆಟ್ಟು ತಿಂದರೂ ಅವು ರಸ್ತೆಯ ಮಧ್ಯದಲ್ಲಿ ನಡೆಯದೆ ಅಂಚಿನಲ್ಲೇ ನಡೆಯುತ್ತವೆ. ಇದೇಕೆ ಹೀಗೆ ಎಂದು

ಕೇಳಿದ್ದಕ್ಕೆ ಕುದುರೆಗಳ ಸ್ವಭಾವವೇ ಹಾಗೆ ಅನ್ನುತ್ತಾನೆ! ಮೊದಲೇ ಏಕೆ ಹೇಳಲಿಲ್ಲ ಎಂದದ್ದಕ್ಕೆ ಅವನಿಂದ ಉತ್ತರವೇ ಇಲ್ಲ.

ನಮ್ಮ ಅಶಕ್ತ ದೇಹಗಳನ್ನು ಹೊತ್ತ ಆ ಅಶಕ್ತ ಕುದುರೆಗಳು ಕೊನೆಗೂ ಗಮ್ಯಸ್ಥಾನ ತಲುಪುತ್ತಿವೆ ಎನ್ನಿಸಿದಾಗ ನಾವು ನೆಮ್ಮದಿಯ ನಿಟ್ಟುಸಿರಿಟ್ಟೆವು. ಆ ಕುದುರೆಯವ ನನ್ನ ಗಂಡ ಕೈ ಸಡಲಿಸುತ್ತಿರುವುದನ್ನು ಗಮನಿಸಿದನೇನೋ; 'ಠೀಕ್ ಸೆ ಪಡಕೊ ಸಾಬ್' (ಸರಿಯಾಗಿ ಹಿಡಕೋ) ಎಂದ. 'ಏಕ್ ಹಾಥ್ ಮೆ ಘೋಡಾ ಪಕಡಾಹ್ನು; ಔರ್ ಏಕ್ ಹಾಥ್ ಮೆ ಜೀವ್ ಪಕಡಾ ಹ್ನು, ಅಂಬ್ ಕ್ಯಾ ಪಡಕೂ? ಕೈಸೆ ಪಕಡೋ' (ಒಂದು ಕೈಲಿ ಕುದುರೆ ಹಿಡ್ಕೊಂಡಿದೀನಿ. ಇನ್ನೊಂದು ಕೈಲಿ ಜೀವ ಹಿಡ್ಕೊಂಡಿದ್ದೀನಿ. ಈಗ ಇನ್ನೇನು ಹಿಡ್ಕೋಬೇಕು? ಹೇಗೆ ಹಿಡ್ಕೋಬೇಕು) ಎಂದರು ನನ್ನ ಗಂಡ. ಅವರ ವಿನೋದದ ಮಾತು ಆ ರಾವುತನಿಗೂ ನಗು ತರಿಸಿತು. ಹ..ಹ... ಎಂದು ನಕ್ಕ ಅವನು. ವಿನೋದ ತನಗೂ ಅರ್ಥವಾಯಿತು ಎಂಬಂತೆ ಮುಂದಿನ ಕುದುರೆ ಜೋರಾಗಿ ಕೆನೆಯಿತು. ಅದು ಕೆನೆದದ್ದನ್ನು ಕಂಡು ನನ್ನ ಕುದುರೆಯೂ ಕೆನೆಯಿತು. ಎರಡು ಕುದುರೆಗಳೂ ಸಂದರ್ಭಕ್ಕೆ ಅನುಗುಣವಾಗಿ ಕೆನೆದದ್ದನ್ನು ಕಂಡು ನಾನೂ (ಕೆನೆದೆ) ನಕ್ಕೆ.

★★★



ಅಂತಿಂಥ ರಸ್ತೆ ಇದು ಅಲ್ಲ!

- ಅರುಣಾ ಆರ್. ಕಾರಂತ

ಅಂತಿಂಥ ರಸ್ತೆ ಇದು ಅಲ್ಲ
ಇದರಂಥ ರಸ್ತೆ ಇನ್ನಿಲ್ಲ
ಎಲ್ಲೆಲ್ಲೂ ಹೊಂಡ ಇದರಲ್ಲಿ
ಕಾಲಿಡಲು ಕೊಂಚ ಭಯ ಇಲ್ಲಿ

ಮಳೆಗಾಲದಲ್ಲಿ ಇದು ನೀರ್ಗದ್ದೆ
ಚಳಿಗಾಲದಲ್ಲಿ ಇದು ಒಣಗುಡ್ಡೆ
ಎಲ್ಲೆಲ್ಲೂ ಕೆಸರು ಬರಿ ಕೆಸರು
ಇಲ್ಲೆಲ್ಲ ಧೂಳು ಬರಿ ಧೂಳು

ಅಗೊ ಅಲ್ಲಿ ಬಂತು ಮೋಟಾರು
ಪಕ್ಕಕ್ಕೆ ಹಾರು ನೀ ಜೋರು
ತಡಮಾಡಬೇಡ ಕೈಲಿ ಕೊಡೆ ಇದೆಯೆಂದು
ಆಗುವುದು ಸ್ನಾನ ಕೆನ್ನೀರು

ಈ ರಸ್ತೆಗೆ ಸುರಿದ ಹಣವೆಲ್ಲ
ಲೆಕ್ಕಿಸಿದರೆ ಸತ್ಯ ಇದು ಮಣ್ಣಲ್ಲ
ಪ್ರತಿ ಕಲ್ಲು ಮರಳು ಮಣ್ಣೆಲ್ಲ
ಕಣ ಕಣವು ಹೊನ್ನ ಹುಡಿಯೆಲ್ಲ

ಸರಕಾರ ಬಂತು ಹೋಯ್ತು ಸರಕಾರ
ಬಿಡಲಿಲ್ಲ ಇದರ ಗ್ರಹಚಾರ
ಅಂದಿಗೂ ಇಂದು ಈ ರಸ್ತೆ
ತಪ್ಪಲಿಲ್ಲ ಜನಕೆ ಅವ್ಯವಸ್ಥೆ

ಗುತ್ತಿಗೆದಾರನಾದ ಸಿರಿವಂತ
ಕುತ್ತಿಗೆ ಹಿಸುಕಿ ಜನರ ಬಲವಂತ
ಕಟ್ಟಿಸಿದ ತೆರಿಗೆ ಎಲ್ಲೋಯ್ತೊ!?
ಬಡಜನರ ಗೋಳು ತಪ್ಪಾದಾಯ್ತೊ!

ಹುರುಳಿ ಕಟ್ಟು...

ಕಲ್ಲು ಕರಗುವ ಹಾಗೆ

– ಎಚ್. ಗೋಪಾಲಕೃಷ್ಣ

ಅದೊಂದು ಬೃಹತ್ ಉದ್ಯಮ. ಅದರಲ್ಲಿ ಖಾಯಂ ನೌಕರರೂ ಸೇರಿದಂತೆ ದಿನಗೂಲಿ ಕೆಲಸಗಾರರು, ತರಬೇತಿ ಪಡೆಯುತ್ತಿರುವವರು, ಗುತ್ತಿಗೆ ಕೆಲಸಗಾರರು... ಹೀಗೆ ಹಲವು ಸಾವಿರ ಜನ ಕಾರ್ಯ ನಿರ್ವಹಿಸುತ್ತಾರೆ. ಅದರ ಜತೆಗೆ ಏನೂ ವಿದ್ಯೆಯೇ ಇಲ್ಲದ ಸುತ್ತಮುತ್ತಲಿನ ಕಡುಬಡವರೂ ಇಲ್ಲಿ ಬಂದು ತೋಟದ ಕೆಲಸ, ಕಸ ಗುಡಿಸುವ, ಶೌಚಾಲಯಗಳನ್ನು ಚೊಕ್ಕಟ ಪಡಿಸುವ ಕೆಲಸ.... ಹೀಗೆ ಹಲವು ರೀತಿಯ ಕಾರ್ಯ ನಿರ್ವಹಿಸುತ್ತಾರೆ.

ಹೀಗೆ ಬರುವ ಕಡು ಬಡವರಿಗೆ ತಮ್ಮ ಕೆಲಸದಲ್ಲಿ ಅಗಾಧವಾದ ತೃಪ್ತಿ ಹಾಗೂ ಕಾರ್ಖಾನೆ ಎಂದರೆ ತಮ್ಮ ಪಾಲಿನ ದೇವರು ಎಂದೇ ನಂಬಿಕೆ! ಇದಕ್ಕೆ ಕಾರಣ ಅಂದರೆ ಕಾರ್ಖಾನೆ ಅಲ್ಲಿರುವವರನ್ನು ಹೆತ್ತ ತಾಯಿ ತನ್ನ ಮಕ್ಕಳನ್ನು ನೋಡಿಕೊಳ್ಳುವಂತೆ ನೋಡಿಕೊಳ್ಳುತ್ತೆ - ಸಮಯಕ್ಕೆ ಸರಿಯಾಗಿ ಹೊಟ್ಟೆಗೆ ಹಾಕುವುದರಿಂದ ಹಿಡಿದು ಕೆಮ್ಮು ನೆಗಡಿ ಅಂದರೂ ಅವರಿಗೆ ಚಿಕಿತ್ಸೆಗೆ ಅಲ್ಲೇ ಚಿಕ್ಕ ಆಸ್ಪತ್ರೆ ಇದೆ; ಮೊನ್ನೆ ಇವರ ಗುಂಪಿನಲ್ಲೇ ಯಾರೋ ಮಹಡಿಯಿಂದ ಜಾರಿ ಕೆಳಗೆ ಬಿದ್ದಾಗ ಕಾರ್ಖಾನೆಯವರೇ ಲಕ್ಷಾಂತರ ರೂಪಾಯಿ ತೆತ್ತು ನಗರದ ದೊಡ್ಡ ಆಸ್ಪತ್ರೆಯಲ್ಲಿ ಅವರಿಗೆ ಚಿಕಿತ್ಸೆ ಕೊಡಿಸಿದ್ದಾರೆ, ಅವನ ಮನೆಯವರನ್ನು ಸಮಾಧಾನ ಪಡಿಸಿದ್ದಾರೆ, ಕಾರ್ಖಾನೆಯ ಮಾಲೀಕರೇ ರಾತ್ರಿ ಸುಮಾರು ಹೊತ್ತು ಮಹಡಿಯಿಂದ ಬಿದ್ದವನ ಹತ್ತಿರ ಕುಳಿತು ಸಮಾಧಾನ ಪಡಿಸಿದ್ದಾರೆ. ಹಾಗೆ ನೋಡಿದರೆ ಇಡೀ ಉದ್ಯಮದಲ್ಲಿ ಇವರಷ್ಟು ಕಡಿಮೆ ವೇತನ ಪಡೆಯುವವರು ಬೇರೆ ಇಲ್ಲ; ಇವರಿಗಿಂತ ಶೋಷಿತರು ಬೇರೆ ಎಲ್ಲೂ ಇಲ್ಲ ಎಂದೇ ಅಲ್ಲಿನ ಕಾರ್ಮಿಕ ನಾಯಕರು ಒಪ್ಪುತ್ತಾರೆ. ಆದರೂ ಅವರಿಗಾಗಿ ಏನನ್ನೂ ಮಾಡುವ ಸ್ಥಿತಿಯಲ್ಲಿ ಈ ಸಂಘಟನೆಗಳು ಇಲ್ಲ. ಇದಕ್ಕೆ ಕಾರಣವೆಂದರೆ ಕಾರ್ಮಿಕ ಸಂಘಟನೆಗಳು ಪ್ರತಿನಿಧಿಸುತ್ತಿರುವುದು ಸಂಘಟಿತ ವರ್ಗವನ್ನು, ಇವರು ಆ ಗುಂಪಿಗೆ ಸೇರಿದವರಲ್ಲ!

ಒಮ್ಮೆ ಉದ್ಯಮದಲ್ಲಿ ಮಾಲೀಕ ವರ್ಗಕ್ಕೂ ನೌಕರರ ವರ್ಗಕ್ಕೂ ಯಾವುದೋ ವಿಷಯದಲ್ಲಿ ಭಿನ್ನಾಭಿಪ್ರಾಯ ತಲೆದೋರಿತು. ಸುಮಾರು ಸುತ್ತು ಮಾತು ಕಥೆ ನಡೆದರೂ ಸಮಸ್ಯೆಗೆ ಯಾವುದೇ ಪರಿಹಾರ ಕಂಡು ಬರಲಿಲ್ಲ. ಕೊನೇ ಅಸ್ತ್ರ ಅಂತ ನೌಕರರು ಅನಿರ್ದಿಷ್ಟ ಮುಷ್ಕರ ಹೂಡುವ ನೋಟೀಸನ್ನೂ ಆಡಳಿತ ವರ್ಗಕ್ಕೆ ನೀಡಾಯಿತು.

ಮಾಲೀಕರು ಹೇಗಾದರೂ ಮಾಡಿ ಉದ್ಯಮ ಮುಚ್ಚಬಾರದು ಅಂತ ಮತ್ತೆ ಸಮಾಲೋಚನೆಗೆ ನೌಕರರನ್ನು ಕರೆದರು. ''ನೋಡೀ ನೀವೆಲ್ಲಾ ಹೊಟ್ಟೆ ಚೆನ್ನಾಗಿ ತುಂಬಿರೋರು. ನಮಗೆ ಏನಾದರೂ ನಿಮಗೆ ಏನೂ ಅನಿಸುಲ್ಲ, ಬಡವರ ಅಳು,


ನೋವು ಕಣ್ಣಿಗೆ ಯಾವತ್ತೂ ಬೀಳೋದಿಲ್ಲ....'' ಅಂತ ಒಂದು ಘಂಟೆ ಮಾಲೀಕರಿಗೆ ಬೆವರು ಹರಿಸಿದರು.

ಮಾಲೀಕರು ಕೊನೆಗೂ ಜಗ್ಗಲೇ ಇಲ್ಲ. ಬಿಡಿ ಯಜಮಾನರೇ ಮುಷ್ಕರವೇ ಗ್ಯಾರಂಟಿ ಮುಂದಾಗುವ ಅನಾಹುತಕ್ಕೆ ನೀವೇ ಜವಾಬ್ದಾರಿ... ಅಂತ ಕೆಲಸಗಾರರ ಪ್ರತಿನಿಧಿಗಳು ಮಾತು ಮುಗಿಸಿ ಹೊರಡುವ ಸೂಚನೆ ನೀಡಿದರು.

ಪ್ರತಿನಿಧಿಗಳಲ್ಲಿ ಒಬ್ಬರಿಗೆ ಅದೇನೋ ಆರನೇ ಸೆನ್ಸ್ ಕೆಲಸ ಮಾಡಿತು. ''ನಮ್ಮ ಮೆಂಬರ್ಸ್ ಬಗ್ಗೆ ನಮಗೆ ಯೋಚನೆ ಇಲ್ಲಾ ಸಾರ್. ಅದು ಹೇಗೋ ಸಾಲ ಪಾಲ ಸಿಗುತ್ತೆ - ಜೀವನ ತಳ್ತಾರೆ. ಆದರೆ ನಮಗೆ ಸಂಕಟ ಆಗೋದು ಪಾಪ ನಮ್ಮ ಕಾರ್ಖಾನೆಯಲ್ಲಿ ತೋಟದ ಕೆಲಸ ಕಸ ಗುಡಿಸುವ ಶೌಚಾಲಯಗಳನ್ನು ಚೊಕ್ಕಟ ಪಡಿಸುವ ಕೆಲಸ ಮಾಡ್ತಾರಲ್ಲಾ ಅವರನ್ನ ನೋಡಿ ಸಂಕಟ ಆಗುತ್ತೆ. ಇಲ್ಲಿ ಬೆಳಿಗ್ಗೆ ಊಟ ಮಾಡಿದವರು ರಾತ್ರಿ ಮನೇಲಿ ಊಟ ಇಲ್ಲದೇ ಮಲಗೋ ಅಷ್ಟು ಬಡವರು. ಬೆಳಿಗ್ಗೆ ಊಟವೂ ತಪ್ಪಿದರೆ ಅವರ ಬದುಕು ಹೇಗೆ ಅಂತ ನಮಗೆ ಚಿಂತೆ.... ಅಂತ ತನ್ನ ಮನಸು ತೋಡಿಕೊಂಡುಬಿಟ್ಟ!

ಮಾಲೀಕನ ಮನಸ್ಸು ಈ ವರೆಗೂ ಛುರುಕ್ ಅನ್ನದೇ ಇದ್ದದ್ದು ಆಗ ಛುರುಛುರು ಅಂದಿತಂತೆ.

ಫಲಿತಾಂಶ - ನೌಕರರ ಬೇಡಿಕೆ ಈಡೇರಿತು.



ಮೆಸ್ಕಾಂನೊಡನೆ ಮು(ಗು)ದ್ದಾಟ

- ರುಕ್ಮಿಣಿಮಾಲಾ

ಪಾತ್ರದಾರಿಗಳು

ಶ್ರೀಹರಿ	ಕೃಷಿಕ
ಲಕ್ಷ್ಮಿ	ಕೃಷಿಕನ ಹೆಂಡತಿ
ಲಲಿತ	ಕೈಗಾರಿಕೋದ್ಯಮಿ, ಸಮಾಜದ ಬಗ್ಗೆ ಕಳಕಳಿ ಇರುವವಳು
ಮಾಧವ	ಮೆಸ್ಕಾಂನಲ್ಲಿ ಅಧಿಕಾರಿ
ಮಾಧವಿ	ಅಧಿಕಾರಿಯ ಪತ್ನಿ
ರಾಜೀವ	ಮೆಸ್ಕಾಂನಲ್ಲಿ ದೂರು ಸ್ವೀಕರಿಸುವವ

ದೃಶ್ಯ ೧

(ಶ್ರೀಹರಿ ಹಾಗೂ ಲಕ್ಷ್ಮಿ ರಾತ್ರಿ ದೂರದರ್ಶನದ ಎದುರು ಕುಳಿತು ಮೂಡಲಮನೆ ಧಾರಾವಾಹಿ ನೋಡುತ್ತಿದ್ದಾರೆ. ಆಗ ವಿದ್ಯುತ್ ಹೋಗುತ್ತದೆ.)

ಲಕ್ಷ್ಮಿ: ಹಾಳಾದ ಮೆಸ್ಕಾಂನವರು ಒಳ್ಳೆಯ ರಸವತ್ತಾದ ದೃಶ್ಯ ಬರುವಾಗಲೇ ವಿದ್ಯುತ್ ತೆಗೆಯುತ್ತಾರೆ.

ಶ್ರೀಹರಿ: ಈಗ ಗಂಟೆ ರಾತ್ರಿ ೧೦. ವಿದ್ಯುತ್ ಈಗ ಬರುತ್ತದಲ್ಲ. ಮೂರು ಫೇಸ್ ವಿದ್ಯುತ್ ಕೊಡುತ್ತಾರೆ. ಅದಕ್ಕೆ ವಿದ್ಯುತ್ ತೆಗೆದಿದ್ದಾರೆ. ತೋಟಕ್ಕೆ ನೀರು ಹಾಕಲು ಹೋಗಬೇಕು. ಈ ಡಿಸೆಂಬರ್ ಚಳಿಗೆ ತೋಟಕ್ಕೆ ಹೋಗಲು ಮನಸ್ಸೇ ಬರುವುದಿಲ್ಲ.

ಲಕ್ಷ್ಮಿ: ಅಲ್ಲ ಯಾವ ಸರ್ಕಾರವೇ ಬರಲಿ ಇದರಿಂದ ಕೃಷಿಕರಿಗೇನು ಬಿಡಿಗಾಸಿನ ಉಪಕಾರವಿಲ್ಲ. ದಿನೇ ದಿನೇ ಕೃಷಿಕರಿಗೆ ಕಷ್ಟಗಳು ಹೆಚ್ಚುತ್ತಲೇ ಇವೆ. ಅದೂ ಸಾಲದೆಂಬಂತೆ ಈ ವರ್ಷ ವಿದ್ಯುತ್ ಕಡಿತ ಬಹಳ ಬೇಗ ಸುರುವಾಗಿದೆ. ಸರಕಾರದವರ ತಾರತಮ್ಯ ನೀತಿಯಿಂದ ಕೃಷಿಕರು ಕಂಗೆಡುತ್ತಿದ್ದಾರೆ. ಅದು ಏನು ಪೇಟೆಯಲ್ಲಿ ಕರೆಂಟ್ ಕಡಿತ ದಿನದಲ್ಲಿ ಒಂದೆರಡು ಗಂಟೆ ಮಾತ್ರ. ಅದೂ ಯಾವಾಗಲೂ ಇಲ್ಲ. ಮಾರ್ಚ್ ಏಪ್ರಿಲಿನಲ್ಲಿ ಮಾತ್ರ. ನಮಗೇನು ಅವರು ಪುಕ್ಕಟೆ ವಿದ್ಯುತ್ ಕೊಡುವುದು ಬೇಡ. ದಿನದಲ್ಲಿ ಹಗಲು ಸರಿಯಾಗಿ ೩ ಫೇಸ್ನಲ್ಲಿ ೫ ಗಂಟೆ ವಿದ್ಯುತ್ ಕೊಡಲಿ ಸಾಕು. ಅವರು ಆಶ್ವಾಸನೆ ಕೊಟ್ಟಂತೆ ೬ ಗಂಟೆ ಬೇಡ. ಪೇಟೆಯಲ್ಲಿ ಬೀದಿ ದೀಪಗಳು ಹಗಲಿನಲ್ಲೂ ಉರಿಯುತ್ತಲೇ ಇರುತ್ತವೆ. ಆ ಪೋಲು ಆಗುವ ವಿದ್ಯುತ್ ನಮಗೆ ಕೊಟ್ಟರೆ ಸಾಕು. ಇದು ದಿನಾ ರಾತ್ರಿ ನಿದ್ದೆಗೆಟ್ಟು ಈ ಚಳಿಯಲ್ಲಿ ತೋಟಕ್ಕೆ ನೀರುಣಿಸಬೇಕು. ನೀರು ಹಾಕದಿದ್ದರೆ

ಇರುವ ತೋಟವನ್ನು ಉಳಿಸಿಕೊಳ್ಳಬೇಕಲ್ಲ. ಇಲ್ಲದಿದ್ದರೆ ಉಣ್ಣುವುದೇನನ್ನು. ಕೃಷಿಕರ ಕಷ್ಟ ಪೇಟೆಯಲ್ಲಿ ಕಚೇರಿಯಲ್ಲಿ ಕುಳಿತು ಕರೆಂಟು ತೆಗೆಯುವ ಅಧಿಕಾರಿಗಳಿಗೆಲ್ಲಿ ಗೊತ್ತಾಗಬೇಕು? ಎಲ್ಲ ನಮ್ಮ ಕರ್ಮ.

(ಆಗ ವಿದ್ಯುತ್ ಬೆಳಗುತ್ತದೆ)

ಶ್ರೀಹರಿ: ಅಗೊ ಕರೆಂಟ್ ಬಂತು. ಕರೆಂಟ್ ಬಂದಕೂಡಲೆ ಪಂಪ್ ಚಾಲೂ ಮಾಡಲು ರಾಮನಲ್ಲಿ ಹೇಳಿದ್ದೆ. ಅವನು ಒಂದೊಂದು ಸಲ ಮರೆತು ಬಿಡುತ್ತಾನೆ. ಚಳಿ ಕಾಯಿಸುತ್ತ ಬೆಂಕಿಯ ಬುಡದಲ್ಲಿ ಹಾಡು ಹೇಳುತ್ತ ಕುಳಿತರೆ ಅವನಿಗೆ ಪ್ರಪಂಚವೇ ಮರೆತು ಹೋಗುತ್ತದೆ. ರಾಮ ಪಂಪ್ ಸ್ವಿಚ್ ಹಾಕಿದ್ದಾನೊ ಇಲ್ಲವೊ ಎಂದು ಒಮ್ಮೆ ಹೋಗಿ ನೋಡಿ ಬಂದರೇ ಸಮಾಧಾನ. ಹನಿ ನೀರಾವರಿ ಅಳವಡಿಸಿದ್ದರಿಂದ ಅಲ್ಲೇ ನಿಂತು ನೀರುಣಿಸುವ ಕೆಲಸ ಇಲ್ಲ. ಹಾಗೂ ಇರುವ ನೀರನ್ನು ಎಲ್ಲ ಗಿಡಮರಗಳಿಗೂ ಹಂಚಲು ಸಾಧ್ಯವಾಗುತ್ತದೆ. ಬಾಗಿಲು ಹಾಕಿಕೊ. ಬೇಗ ಬರುತ್ತೇನೆ.

ಲಕ್ಷ್ಮಿ: ಈ ಚಳಿಗೆ ಬೆಚ್ಚಗೆ ಸ್ವೆಟರ್ ಹಾಕಿಕೊಳ್ಳಬಾರದೆ? ಮಗ ತಂದು ಕೊಟ್ಟಿದ್ದಾನೆ. ಅದನ್ನು ಈ ಚಳಿ ಸಮಯದಲ್ಲಾದರೂ ಉಪಯೋಗಿಸಬಾರದೆ? ಹೋಗಲಿ ಒಂದು ಅಂಗಿಯಾದರೂ ಹಾಕಿಕೊಳ್ಳಿ.

(ಶ್ರೀಹರಿ ಅಂಗಿ ಸಿಕ್ಕಿಸಿಕೊಳ್ಳುತ್ತ ಹೋಗುವನು. ತೆರೆ ಬೀಳುತ್ತದೆ.)

ದೃಶ್ಯ ೨

(ಲಲಿತ ದೂರವಾಣಿ ಎದುರು ಕುಳಿತಿದ್ದಾಳೆ. ಆಗ ಮಧ್ಯಾಹ್ನ ಗಂಟೆ ೧೨)

ಲಲಿತ: ಲಲಿತ ಮಾತಾಡುವುದು. ಇದು ಮೆಸ್ಕಾಂ ಕಚೇರಿಯೇ?

ರಾಜೀವ: ಹೌದು. ಇದು ದೂರು ವಿಭಾಗ. ಏನು ನಿಮ್ಮ ಸಮಸ್ಯೆ?

ಲಲಿತ: ನಾನು ವಿಜಯನಗರದಿಂದ ಮಾತಾಡುತ್ತಿರುವುದು. ಒಂದು ಪ್ರಶ್ನೆಗೆ ನಿಮ್ಮಿಂದ ಉತ್ತರ ತಿಳಿದುಕೊಳ್ಳಬೇಕಿತ್ತು. ಪ್ರಶ್ನೆ ಕೇಳಲೆ?

ರಾಜೀವ: ಕೇಳಿ ಮೇಡಂ. ಅದಕ್ಕಾಗಿಯೇ ಇಲ್ಲಿ ನನ್ನನ್ನು ಕೂರಿಸಿರುವುದು.

ಲಲಿತ: ಬೀದಿ ದೀಪಗಳು ಸೋಲಾರ್‌ನಿಂದ ಉರಿಯುತ್ತಿರುವುದೆ?

ರಾಜೀವ: ಹ್ಹೆ ಹ್ಹೆ ಹ್ಹೆ ಅಷ್ಟೂ ಗೊತ್ತಿಲ್ವೆ ಮೇಡಂ ನಿಮಗೆ. ಸೋಲಾರಿಂದ ಬೀದಿದೀಪ ಉರಿಯುತ್ತದಾ. ಇಲ್ಲ ಇಲ್ಲ.

ಲಲಿತ: (ಸ್ವಗತದಲ್ಲಿ ರಿಸೀವರ್‌ಗೆ ಕೈ ಅಡ್ಡ ಹಿಡಿದುಕೊಂಡು, ಸೋಲಾರ್ ಸೌಲಭ್ಯ ಅಳವಡಿಸಿ ಬೀದಿ ದೀಪ ಉರಿಸಲಾಗುತ್ತದೆ ಎಂದೂ ಈ ಮನುಷ್ಯನಿಗೆ ಗೊತ್ತಿಲ್ಲ. ಭಾರೀ ಜೋಕ್ ಕೇಳಿದಂತೆ ನಗುತ್ತಾನೆ. ಇವನ ಬುದ್ಧಿಗೆ ಏನನ್ನಬೇಕು?) ನೀವು ನಗುವುದು ಏಕೆ? ಸೋಲಾರಿನಿಂದ ಬೀದಿ ದೀಪ

ಅಳವಡಿಸಿದ ಉದಾಹರಣೆ ಎಷ್ಟೋ ಇವೆ. ನಿಮಗೆ ಆ ವಿಷಯ ಗೊತ್ತಿಲ್ಲ ಅಷ್ಟೆ. ನಗುವಂಥ ವಿಷಯವಲ್ಲ ಇದು. ಗೊತ್ತಿಲ್ಲದಿದ್ದರೆ ಗೊತ್ತಿಲ್ಲ ಎನ್ನಿ. ಅದು ಬಿಟ್ಟು ಜೋಕ್ ಕೇಳಿದಂತೆ ನಗುತ್ತಿದ್ದೀರಲ್ಲ? ನಾನು ಕೇಳಿದ್ದು ಏಕೆಂದರೆ ಇಲ್ಲಿ ಇಡೀ ಬೀದಿಯಲ್ಲಿ ಬೀದಿ ದೀಪಗಳು ಇನ್ನೂ ಉರಿಯುತ್ತಲೇ ಇದೆ. ಈಗ ಹಗಲು. ಅದಕ್ಕಾಗಿ ಹಾಗೆ ಕೇಳಬೇಕಾಯಿತು. ಸೋಲಾರ್ ಆದರೆ ಪರವಾ ಇಲ್ಲ. ಉರಿಯಲಿ ಬಿಡಿ. ವಿದ್ಯುತ್ ಸಮಸ್ಯೆ, ಅಭಾವ ಎಂದು ನಮ್ಮ ಕೃಷಿಕರಿಗೆ ದಿನದಲ್ಲಿ ೧೦ ಗಂಟೆ ವಿದ್ಯುತ್ ಕಡಿತ ಮಾಡುತ್ತೀರಲ್ಲ, ಹೀಗೆ ವಿದ್ಯುತ್ ಪೋಲು ಮಾಡುವುದನ್ನೇ ತಡೆದು ಹಳ್ಳಿಗಳಿಗೆ ನೀಡಬಹುದಲ್ಲ. ಹಗಲು ದೀಪ ಉರಿಯುವಂಥ ದೃಶ್ಯ ಇನ್ನೂ ಎಷ್ಟು ಬೀದಿಗಳಲ್ಲಿ ಕಾಣಬರುತ್ತದೊ ಏನೊ?

ರಾಜೀವ: (ಲಲಿತಳ ಮಾತಿನ ವರಸೆಯಿಂದ ಪೆಚ್ಚಾಗಿ) ಅದಾ ಅದು ಅದು ನೀವು ಎಲ್ಲಿಂದ ಮಾತಾಡುತ್ತಿರುವುದು ಎಂದಿರಿ?

ಲಲಿತ: (ಕೋಪದಿಂದ ಸಿಡುಕುತ್ತ) ಎಷ್ಟು ಸಲ ಹೇಳಬೇಕು ಆಗಲೇ ಹೇಳಿದೆನಲ್ಲ ವಿಜಯನಗರದಿಂದ ಎಂದು.

ರಾಜೀವ: ಅದು ಅದು ವಿಜಯನಗರ ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಮೇಡಂ. ನಾವು ಕ್ರಮ ಕೈಗೊಳ್ಳಲು ಆಗುವುದಿಲ್ಲ. (ಲಲಿತ ಇನ್ನು ಏನಾದರೂ ಕೇಳುವ ಮೊದಲೆ ದೂರವಾಣಿ ಸಂಪರ್ಕ ಕಡಿತಗೊಳಿಸಿ ನಿಟ್ಟುಸಿರು ಬಿಡುತ್ತಾನೆ ರಾಜೀವ)

(ಲಲಿತ ಫೋನು ಕುಕ್ಕುತ್ತ, ಈ ಮನುಷ್ಯರಿಗೆ ಇರುವ ತಪ್ಪನ್ನು ಎತ್ತಿ ತೋರಿಸಿ ಹೇಳಿದರೆ ಆಗುವುದಿಲ್ಲ. ನನಗೆ ಗೊತ್ತಿಲ್ಲವೆ ಇದೇ ವ್ಯಾಪ್ತಿಗೆ ಒಳಪಡುತ್ತದೆ ಎಂದು. ಎಷ್ಟು ಸಲ ಇದೇ ಸಂಖ್ಯೆಗೆ ದೂರವಾಣಿಸಿದ್ದೇನೆ. ಎಲ್ಲ ಹೀಗೆ ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೊಣೆ ತಪ್ಪಿಸಲು ನೋಡುತ್ತಾರೆ ಎಂದು ಆಕ್ರೋಶದಿಂದ ನುಡಿದು ಎದ್ದು ಹೋಗುತ್ತಾಳೆ. ತೆರೆ ಸರಿಯುತ್ತದೆ.)

ದೃಶ್ಯ ೩

(ಮಾಧವ ರಾತ್ರಿ ಚಿಂತಾಕ್ರಾಂತನಾಗಿ ಕುಳಿತಿದ್ದಾನೆ. ಮಾಧವಿ ಒಂದು ಲೋಟ ಹಾಲು ತೆಗೆದುಕೊಂಡು ಅಲ್ಲಿಗೆ ಬರುತ್ತಾಳೆ. ಹಾಲಿನ ಲೋಟ ಮಾಧವನಿಗೆ ಕೊಡುತ್ತಾಳೆ.)

ಮಾಧವಿ: ಏನು ಚಿಂತೆ? ಆಗಿನಿಂದ ನೋಡುತ್ತಿದ್ದೇನೆ. ನೀವು ಎಂದಿನಂತಿಲ್ಲ. ಏನಾಯಿತು? ಆಫೀಸಿನಲ್ಲಿ ಏನಾದರೂ ಸಮಸ್ಯೆಯಾ?

ಮಾಧವ: ಏನು ಹೇಳಲಿ? ಆಫೀಸಿನಲ್ಲಿ ಸಮಸ್ಯೆಯೆಂದೇ ಹೇಳಬಹುದು. ದಿನ ಬೆಳಗಾದರೆ ಆಫೀಸಿಗೆ ಕೃಷಿಕರಿಂದ ದೂರು ಪತ್ರಗಳು

ಪುಂಖಾನುಪುಂಖವಾಗಿ ಹರಿದು ಬರುತ್ತಲೇ ಇವೆ. ಕೃಷಿಕರು ನಿತ್ಯ ನಮಗೆ ಹಿಡಿಶಾಪ ಹಾಕುತ್ತಿದ್ದಾರೆ.

ಮಾಧವಿ: ಏನೇ ಹೇಳಿ. ಸರಕಾರ ಅನುಸರಿಸುತ್ತಿರುವ ಕ್ರಮ ಸರಿ ಇಲ್ಲ. ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಕಣ್ರಿ. ಅದು ಯಾವ ನ್ಯಾಯ. ಹಳ್ಳಿಗೆ ಒಂದು ನೀತಿ ಪೇಟೆಗೆ ಒಂದು ನಿಯಮ. ಅಲ್ಲ ಅಷ್ಟೊಂದು ಗಂಟೆ ಹಳ್ಳಿಯವರಿಗೆ ಏಕೆ ವಿದ್ಯುತ್ ಕಡಿತ ಮಾಡಬೇಕು? ಪೇಟೆ ಹಳ್ಳಿಗೆ ಸಮವಾಗಿ ಕರೆಂಟ್ ಕಡಿತವನ್ನು ಹಂಚಲಿ. ಕಡಿತ ಉಂಟೆಂದು ಹಳ್ಳಿಯವರಿಗೆ ಏನು ಯೂನಿಟ್‌ನಲ್ಲಿ ರಿಯಾಯತಿ ದರ ನಿಗದಿ ಪಡಿಸಿದ್ದಾರೊ? ಪೇಟೆಗೆ ಕರೆಂಟ್ ಕಡಿತ ಎಂದು ಇಲ್ಲವಲ್ಲ. ಇದ್ದರೂ ದಿನಕ್ಕೆ ಒಂದೆರಡು ಗಂಟೆ ಅಷ್ಟೆ. ಹಳ್ಳಿಯಲ್ಲಿರುವವರೂ ಪೇಟೆಯವರಷ್ಟೆ ಶುಲ್ಕ ಕಟ್ಟುತ್ತಾರಲ್ಲ. ರಾಯಚೂರ್ ಥರ್ಮಲ್ ವಿದ್ಯುತ್ ಘಟಕ ಸಿಬ್ಬಂದಿಯವರ ಮನೆಯಲ್ಲಿ ಮಾಡುವ ಕರೆಂಟ್ ವ್ಯಯವನ್ನು ನಮ್ಮ ವಾಣಿ ಯಾವಾಗಲೂ ಹೇಳುತ್ತಿರುತ್ತಾಳೆ. ಅವಳ ಗಂಡನಿಗೂ ಅಲ್ಲಿ ಕೆಲಸ ಗೊತ್ತಲ್ಲ ನಿಮಗೆ. ಅಲ್ಲಿ ಹೆಚ್ಚಿನ ಮಂದಿ ಅಡುಗೆಗೆ ಹೀಟರ್ ಲೆಕ್ಕವಿಲ್ಲದಂತೆ ಉಪಯೋಗಿಸುತ್ತಾರಂತೆ. ಸ್ನಾನಕ್ಕೆ ಬಾಯಿಲರ್ ಸ್ವಿಚ್ ಒಮ್ಮೆ ಹಾಕಿದರೆ ಮತ್ತೆ ಅದನ್ನು ನಂದಿಸುವಾಗ ಎಷ್ಟೋ ಗಂಟೆಗಳು ಕಳೆದಿರುತ್ತವಂತೆ. ನೀರು ಕೊತ ಕೊತನೆ ಕುದಿಯುತ್ತಿರುತ್ತದಂತೆ. ವಿದ್ಯುತ್ ಅಪವ್ಯಯ ಕಂಡು ವಾಣಿ ಹೇಳಿದ್ದಕ್ಕೆ ಬಿಡಿ ನಾವೇನು ದುಡ್ಡು ಕಟ್ಟುತ್ತಿಲ್ಲವಲ್ಲ ಎಂಬ ಉಢಾಪೆಯ ಉತ್ತರ ಕೊಡುತ್ತಾರಂತೆ. ನಮ್ಮ ವಾಣಿಗೆ ಅಂಥ ಬೇಜವಾಬ್ದಾರಿ ಕಂಡರೆ ಆಗುವುದಿಲ್ಲ. ಅವಳು ಬಹಳ ಶಿಸ್ತಿನ ಹೆಣ್ಣುಮಗಳು. ಅವಳ ಬಗ್ಗೆ ಒಂದು ಉದಾಹರಣೆ ಕೊಡುತ್ತೇನೆ ಕೇಳಿ. ನಮ್ಮ ರವಿಯ ಮದುವೆಗೆ ದಿಬ್ಬಣ ಹೊರಡಲು ೨ ಬಸ್ ಮಾಡಿದ್ದರು ನೆನಪಿದೆ ತಾನೆ. ಒಂದರಲ್ಲಿ ವಯಸ್ಸಾದವರು ಹತ್ತಿದ್ದರು. ಇನ್ನೊಂದು ಬಸ್ಸಲ್ಲಿ ಎಲ್ಲ ಯುವಕ ಯುವತಿ ಮಕ್ಕಳು ಹತ್ತಿದ್ದರು. ನಾನೂ ವಯಸ್ಸು ದಾಟಿದ್ದರೂ ೨ನೇ ಬಸ್ಸಿಗೆ ಹತ್ತಿದ್ದೆ. ವಾಣಿಯೂ ಅದೇ ಬಸ್ಸಲ್ಲಿದ್ದಳು. ಮಕ್ಕಳು ಅಂತ್ಯಾಕ್ಷರಿ ಆಡಲು ಹಾಡಲು ತೊಡಗಿದಾಗ ನಮ್ಮಂಥವರು ಮಕ್ಕಳಿಗೆ ಸಪೋರ್ಟ್ ಮಾಡುತ್ತ ಇದ್ದೆವು. ಆಗ ಯಾರೊ ಒಬ್ಬರು ಜನಗಣಮನ ಹಾಡಲು ತೊಡಗಿದರು. ಆ ಕೂಡಲೆ ಎದ್ದು ನಿಂತ ವಾಣಿ ನಿಲ್ಲಿ ಎಂದು ಉದ್ವೇಗದಿಂದ ಹೇಳಿದಳು. ಏನು ತಿಳಿದಿದ್ದೀರಿ ನೀವು? ಇದು ರಾಷ್ಟ್ರಗೀತೆ. ಅದನ್ನು ಎಂಥ ಸಂದರ್ಭದಲ್ಲಿ ಹಾಡಬೇಕು ಎಂದು ಗೊತ್ತಿಲ್ವ ನಿಮಗೆ? ಹೀಗೆ ಎಲ್ಲೆಂದರಲ್ಲಿ ಕುಳಿತು ಹಾಡುವಂಥದ್ದಲ್ಲ. ಅದಕ್ಕೆ ಮರ್ಯಾದೆ ಕೊಡುವುದು ಬೇಡವಾ? ಎಂದು ಸಣ್ಣ ಭಾಷಣ ಕೊಟ್ಟಳು. ಅಲ್ಲಿ ಸೇರಿದ್ದವರೆಲ್ಲ ಗಪ್‌ಚುಪ್ಪಾಗಿ ತಲೆ ತಗ್ಗಿಸಿದರು. ತಮ್ಮ ತಪ್ಪನ್ನು ಅರಿತರು. ನನಗೆ ಅವಳ ಸ್ವಾಭಿಮಾನ, ನಮ್ಮ

ರಾಷ್ಟ್ರದ ಬಗ್ಗೆ ಇರುವ ಗೌರವ ಕಂಡು ತುಂಬ ಸಂತೋಷವಾಯಿತು. ಅವಳು ಒಮ್ಮೆ ನನ್ನಲ್ಲಿ ವಿಷಾದದಿಂದ ಹೇಳಿದ್ದಳು, ನಮ್ಮ ವಠಾರದಲ್ಲಿ ಮಾಡುವ ವಿದ್ಯುತ್ ಪೋಲು ನಮ್ಮ ರಾಜ್ಯದ ಇಡೀ ರೈತರಿಗೆ ಸಾಕು ಎಂದು. ಅಲ್ಲವೇ ಮತ್ತೆ ಎಂದು ನನಗೂ ಅನಿಸಿತ್ತು. ಇಲ್ಲಿಯೂ ಅಷ್ಟೆ. ಅಂಥವರು ಬೇಕಷ್ಟು ಜನರನ್ನು ನೋಡಿದ್ದೇನೆ. ಹಗಲು ಹೊತ್ತು ವಿದ್ಯುತ್‌ದೀಪ ಉರಿಸುವುದು, ಜನ ಅಲ್ಲಿ ಇರಲಿ ಇಲ್ಲದಿರಲಿ ವಿದ್ಯುತ್ ಪಂಕ ತಿರುಗುತ್ತಲೇ ಇರುವುದು, ನೀರು ಪೋಲು ಮಾಡುವುದು ಇತ್ಯಾದಿ ಕಂಡು ಹೇಳಿದರೆ ಬಿಡಿ ಮೇಡಂ ನಾವು ಬಿಲ್ ಕಟ್ಟುತ್ತಿಲ್ಲ ಎಂದೋ ನಾವು ತಾನೆ ಬಿಲ್ ಕಟ್ಟುವುದು ಎಂದೋ ಉಢಾಪೆಯಿಂದ ನುಡಿಯುತ್ತಾರೆ. ಬಿಲ್ ಕಟ್ಟುವುದು ದೊಡ್ಡದಲ್ಲ. ಅಮೂಲ್ಯವಾದ ಅಷ್ಟು ಸಂಪನ್ಮೂಲ ವ್ಯರ್ಥವಾಗುವುದು, ನೀರು, ವಿದ್ಯುತ್ ಉತ್ಪಾದನೆಯೇ ಸಮಸ್ಯೆ ಆಗಿರುವುದು ಅವರಿಗೆ ಗೋಚರವಾಗುವುದೇ ಇಲ್ಲ. ಯಾವಾಗ ಅವರಿಗೆ ಬುದ್ಧಿ ಬರುತ್ತದೋ ಆ ಬುದ್ಧ ಭಗವಾನನೇ ಹೇಳಬೇಕಷ್ಟೆ. ಪೋಲು ಆಗುವ ವಿದ್ಯುತ್ ಲೆಕ್ಕ ಹಾಕಿದರೆ ಹಳ್ಳಿಗಳಿಗೆ ವಿದ್ಯುತ್ ಕಡಿತ ಮಾಡುವ ಅವಶ್ಯಕತೆಯೇ ಬರಲಿಕ್ಕಿಲ್ಲ. ನೀವೇನಂತೀರಿ?

ಮಾಧವ: ಏನು ವಾಣಿಯಿಂದ ಸ್ಫೂರ್ತಿಗೊಂಡು ಭಾಷಣ ಕೊಡುತ್ತಿದ್ದಿಯಲ್ಲ. ಇದು ಬಡಪಾಯಿ ನಾನು ಕಣೆ. ನಿನ್ನ ರೋಷವನ್ನು ನನ್ನ ಮೇಲೆ ತೋರುತ್ತಿದ್ದಿಯಲ್ಲ. ನೀನೂ ರೈತರ ಕಡೆಯೇ ಹಾಗಾದರೆ. ನೀನು ಹೇಳುವುದು ಹಾಗೂ ವಾಣಿ ಅಭಿಪ್ರಾಯವೂ ಸರಿ. ಆದರೆ ಇಂಥ ವಿಚಾರವೆಲ್ಲ ನಮ್ಮ ಜನರಿಗೇ ಅರ್ಥವಾಗಿ ಅವರೇ ಸುಧಾರಿಸಬೇಕಾದ್ದು ಮುಖ್ಯ. ನಾವು ಏನು ಮಾಡಲೂ ಸಾಧ್ಯವಿಲ್ಲ. ಯಾವಾಗ ನಮ್ಮ ಜನ ಇಂಥ ಒಳ್ಳೆಯ ಭಾವನೆಗಳನ್ನು ಬೆಳೆಸಿಕೊಳ್ಳುತ್ತಾರೊ ಎಂದು ಕಾಯಬೇಕು. ಇಲ್ಲ ದೇವರು ಪ್ರತ್ಯಕ್ಷನಾಗಿ ಅವರಿಗೆಲ್ಲ ಇಂಥ ಬುದ್ಧಿಯನ್ನು ದಯಪಾಲಿಸಬೇಕು. ಅದು ಈ ಯುಗದಲ್ಲಿ ಸಾಧ್ಯವಾದೀತೆ? ಇಲ್ಲವೇ ಅವರಿಗೆಲ್ಲ ಉಚಿತ ವಿದ್ಯುತ್ ನೀಡುವುದನ್ನು ನಿಲ್ಲಸಬೇಕು.

ಮಾಧವಿ: ಯಾವಾಗಲೂ ಸತ್ಯ ನ್ಯಾಯದ ಕಡೆಗೆ ನನ್ನ ಮತ. ಯಾವುದು ಅನ್ಯಾಯವೋ ಅದನ್ನು ಖಂಡಿಸುವುದು ನನ್ನ ಸ್ವಭಾವ. ಅದು ಧರ್ಮ ಕೂಡ.

ಮಾಧವ: ನೀನು ಹೇಳುವುದು ಸರಿಯಾದ ವಿಚಾರ. ಸರಕಾರ ಯಾಕೊ ತಾರತಮ್ಯ ಧೋರಣೆ ತಳೆಯುತ್ತಿದೆ. ಆದರೆ ಇದಕ್ಕೆ ಪರಿಹಾರ ಸೂಚಿಸಲು ನಮಗೆ ಸಾಧ್ಯವಿಲ್ಲವಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಕೃಷಿಕರ ಕಷ್ಟ ನನಗೆ ಅರ್ಥವಾಗುತ್ತದೆ. ನಾನು ಅವರಿಗೆ ಸಮರ್ಪಕವಾಗಿ ವಿದ್ಯುತ್ ಕೊಡಲು ಶಕ್ತನಲ್ಲವಲ್ಲ ಎಂಬುದೇ ಸಂಕಟದ ವಿಚಾರ. ಸರಕಾರ ನ್ಯಾಯವಾದ ಹಾದಿ ಹಿಡಿದರೆ ಇದಕ್ಕೆ ಶಾಶ್ವತ ಪರಿಹಾರ ದೊರಕೀತು.

(ತೆರೆ ಬೀಳುತ್ತದೆ)

ದೃಶ್ಯ ೪

(ಲಕ್ಷ್ಮಿ ಅಡುಗೆಮನೆಯಲ್ಲಿ ಅತ್ತಿಂದ ಇತ್ತ ಇತ್ತಿಂದ ಅತ್ತ ಸುತ್ತುತ್ತಿದ್ದಾಳೆ. ಕೈ ಕೈ ಹಿಸುಕುತ್ತಿದ್ದಾಳೆ. ಆಗ ಶ್ರೀಹರಿಯು ಪ್ರವೇಶವಾಗುತ್ತದೆ:)

ಶ್ರೀಹರಿ: ಅಡುಗೆ ಆಯಿತಾ? ಬೇಗ ಹೋಗಬೇಕು ಇಂದು ಪೇಟೆಗೆ. ಅಲ್ಲಿ ಇಂದು ವಿದ್ಯುತ್ ಅದಾಲತ್‌ನಲ್ಲಿ ಭಾಗವಹಿಸಬೇಕು ನಾನು.

ಲಕ್ಷ್ಮಿ: ಅಡುಗೆ ಆಗುವುದು ಹೇಗೆ? ಈ ಮೆಸ್ಕಾಂನವರ ದಿನಕ್ಕೊಂದು ನಿಯಮದಲ್ಲಿ. ಇಂದು ನೋಡಿ ಮಧ್ಯಾಹ್ನ ೧೨.೩೦ಕ್ಕೆ ಕರೆಂಟ್ ಬರಬೇಕು. ಈಗ ೧೨.೪೫ ಆಯಿತು ಇನ್ನೂ ಬಂದಿಲ್ಲ. ಬೆಳಗ್ಗೆ ೬.೩೦ಕ್ಕೆ ಸರಿಯಾಗಿ ಕಡಿತ ಗೊಳಿಸಿದ್ದಾರೆ. ಆಗ ಗಡಿಯಾರವನ್ನು ಸರಿಯಾಗಿ ಮಾಡಿಕೊಳ್ಳಬಹುದು ಅಷ್ಟು ಕರಾರುವಾಕ್ಕಾಗಿರುತ್ತದೆ ಸಮಯ. ಆದರೆ ವಿದ್ಯುತ್ ವಾಪಾಸು ಬರಲು ಮಾತ್ರ ಬೇರೆಯೇ ವಿಚಾರ. ೧೨.೩೦ಕ್ಕೆ ಕರೆಂಟ್ ಬರುತ್ತಲ್ಲ ಎಂದು ಸಾಂಬಾರಿಗೆ ಮಿಕ್ಸಿಯಲ್ಲಿ ಕಾಯಿತುರಿ ಹಾಕಿಟ್ಟಿದ್ದೆ. ರುಬ್ಬಿ ಕುದಿಸಿದರಾಯಿತು ಎಂದು. ತೋಟಕ್ಕೆ ಬಾಳೆ ಎಲೆ ತರಲು ಹೋಗಿದ್ದೆ. ಬಂದು ನೋಡುತ್ತೇನೆ ಕರೆಂಟಿನ ಪತ್ತೆ ಇಲ್ಲ. ಇಂದು ನೀವು ಎಂದಿಗಿಂತ ಬೇಗ ಬೇರೆ ಊಟಕ್ಕೆ ಬಂದಿದ್ದೀರಿ. ಬೇಗ ಹೋಗಲುಂಟು ಎಂದು ನೀವು ಮೊದಲೇ ಹೇಳಿದ್ದರೆ ಆಗಲೇ ರುಬ್ಬುವ ಕಲ್ಲಲ್ಲಿ ಅರೆದಿಡುತ್ತಿದ್ದೆ. ನನಗಂತೂ ಸಾಕಾಗಿದೆ ಕರೆಂಟಿನೊಡನೆ ಗು(ದು)ದ್ದಾಟವಾಡಿ.

ಶ್ರೀಹರಿ: ರೈತರನ್ನು ಈ ರೀತಿ ಸತಾಯಿಸಿದರೆ ಎಷ್ಟು ದಿನ ತಾಳ್ಮೆ ಉಳಿದೀತು? ಥೇ. ಇನ್ನು ಸುಮ್ಮನೆ ಕುಳಿತರೆ ಕೆಲ್ಸ ಸಾಗದು. ನಾವೆಲ್ಲ ಒಗ್ಗಟ್ಟಾಗಿ ಮೆಸ್ಕಾಂಗೆ ಸರಕಾರಕ್ಕೆ ದೂರು ಸಲ್ಲಿಸಲೇಬೇಕು. ನಾವು ಸುಮ್ಮಗಿದ್ದಷ್ಟು ಸೌಲಭ್ಯದಿಂದ ವಂಚಿತರಾಗುತ್ತೇವೆ.

ಲಕ್ಷ್ಮಿ: ಹೌದು ಅದೇ ಸರಿಯಾದ ದಾರಿ. ತಿಂಗಳಲ್ಲಿ ೧೫ ದಿನ ಬೆಳಗ್ಗೆ ಕರೆಂಟ್ ಹೋದರೆ ಉಳಿದ ೧೫ ದಿನ ಮಧ್ಯಾಹ್ನ ಮೇಲೆ ತೆಗೆಯುತ್ತಾರೆ. ಸರಿಕಟ್ಟು ಯಾವ ಕಾರ್ಯಕ್ರಮಗಳನ್ನೂ ರೇಡಿಯೋ ಟಿವಿಯಲ್ಲಿ ಕೇಳಲು ನೋಡಲು ಆಗುತ್ತಿಲ್ಲ. ಮೊನ್ನೆ ಮಧ್ಯಾಹ್ನ ೧೨.೩೦ಕ್ಕೆ ಮಹಿಳಾರಂಗದಲ್ಲಿ ಲಲಿತನ ಸಂದರ್ಶನ ಇತ್ತು. ಅದನ್ನು ಕೇಳಬೇಕೆಂದು ನಾನು ತಯಾರಾದರೆ ಆ ಸಮಯಕ್ಕೆ ಸರಿಯಾಗಿ ವಿದ್ಯುತ್ ಕೈಕೊಡಬೇಕೆ. ಲಲಿತನ ಸಂದರ್ಶನ ಕೇಳಬೇಕು ಎಂದು ಅಷ್ಟು ಆಸೆಯಿಂದ ಕಾಯುತ್ತಿದ್ದೆ. ಎಷ್ಟು ಕೋಪ ಬಂತು ಗೊತ್ತ ನನಗೆ ಆಗ ಮೆಸ್ಕಾಂನವರಲ್ಲಿ. ಕೋಪದಲ್ಲಿ ವಯರು ಹಿಡಿದು ಎಳೆದೆ. ಸದ್ಯ ಕರೆಂಟ್ ಇರಲಿಲ್ಲ. ನನಗೆ ಶಾಕ್ ಹೊಡೆಯುವುದು ತಪ್ಪಿತು! ಇನ್ನು ಧಾರವಾಹಿ ನೋಡಲು ಸಾಧ್ಯವೇ ಇಲ್ಲ. ಎಲ್ಲ ಅರ್ಧಂಬರ್ಧ ನೋಡುವುದೇನು ಚೆನ್ನ. ಮೊನ್ನೆ ಒಂದು ತಮಾಷೆ ನಡೆಯಿತು. ಮಗಳು

ಮೊಮ್ಮಕ್ಕಳು ಬಂದಿದ್ದರಲ್ಲ. ಆಗ ಭಾರತ ಬಾಂಗ್ಲಾದೇಶ ಕ್ರಿಕೆಟ್ ಪಂದ್ಯ ಇತ್ತು. ಹಗಲು ರಾತ್ರಿ ಪಂದ್ಯ. ಕರೆಂಟ್ ೧೨.೧೫ಕ್ಕೆ ಬಂದಿದೆ. ಮಕ್ಕಳೆಲ್ಲ ಟಿವಿ ಮುಂದೆ ಕುಳಿತು ಕ್ರಿಕೆಟ್ ನೋಡುವುದರಲ್ಲಿ ಮಗ್ನರಾಗಿದ್ದಾರೆ. ಆಗ ಮಗಳು ಟಿವಿ ಎದುರು ಬಂದು ಕುಳಿತಳು. ನೋಡಿ, ೨.೩೦ಕ್ಕೆ ನನಗೆ ಮಳೆಬಿಲ್ಲು ಧಾರಾವಾಹಿ ನೋಡಬೇಕು. ಕ್ರಿಕೆಟ್ ಎಲ್ಲ ಇಲ್ಲ ಎಂದು ಆಜ್ಞೆ ಮಾಡಿದಾಗ ಗಂಟೆ ೨.೩೦ ಆಯಿತು. ಅವಳು ಹಾಗೆ ಹೇಳುವುದಕ್ಕೆ ಸರಿಯಾಗಿ ಕರೆಂಟ್ ಹೋಯಿತು. ಮಕ್ಕಳೆಲ್ಲ ಹೊ ಎಂದು ಕಿರುಚಿ ಅಮ್ಮನಿಗೆ ಧಾರಾವಾಹಿ ಇಲ್ಲ ಎಂದು ಕುಣಿದು ಅವಳನ್ನು ಅಣಕಿಸಿದರು. ಅವಳು ಪೆಚ್ಚಾಗಿ ಕುಳಿತಳು.

ಶ್ರೀಹರಿ: ಹೌದು. ಆಗಷ್ಟೆ ನಾನು ಅರ್ಧ ಮೈಲು ದೂರದ ತೋಟದ ಪಂಪ್ ಚಾಲೂ ಮಾಡಿ ಮನೆಗೆ ಮರಳಿದ್ದೆ. ಕರೆಂಟ್ ಹೋಯಿತು ಎಂದು ಮಕ್ಕಳು ಕುಣಿಯುವುದು ಕಂಡು ಅಷ್ಟು ದೂರ ಬಿಸಿಲಿನಲ್ಲಿ ಹೋಗಿ ಬಂದದ್ದು ದಂಡವಾಯಿತಲ್ಲ ಎಂದು ನಿಟ್ಟುಸಿರು ಬಿಟ್ಟಿದ್ದೆ. ಮತ್ತೆ ಕರೆಂಟ್ ಬಂದದ್ದು ಸಂಜೆ ೪ಕ್ಕೆ. ಈ ಕರೆಂಟ್ ನಂಬಿ ನೀನು ಅಡುಗೆ ಮಾಡಲು ತೊಡಗಿದರೆ ಫಲವಿಲ್ಲ. ಇವತ್ತು ಅನ್ನ ಮೊಸರು ಉಪ್ಪಿನಕಾಯಿ ಸಾಕು. ಬೇಗ ಊಟ ಮಾಡಿ ಹೋಗುತ್ತೇನೆ.

ಲಕ್ಷ್ಮಿ: ಸರಿ. ಹಾಗೇ ಮಾಡಬೇಕಷ್ಟೆ. ಇನ್ನೇನು ಮಾಡುವುದು. ನಾನು ದಿನಾ ರುಬ್ಬುವ ಕಲ್ಲಲ್ಲೇ ರುಬ್ಬುವುದು. ಇವತ್ತು ಯಾಕೊ ಉದಾಸೀನವಾಗಿ ಮಿಕ್ಸಿಗೆ ಹಾಕಿಟ್ಟಿದ್ದೆ ತಪ್ಪಾಯಿತು. ಯಾರೂ ವಿದ್ಯುತ್ತನ್ನು ಅವಲಂಬಿಸಬಾರದು.

(ಇಬ್ಬರೂ ಊಟ ಮಾಡಲು ಒಳಗೆ ಹೋಗುವರು. ತೆರೆ ಬೀಳುತ್ತದೆ.)

ದೃಶ್ಯ ೫

(ಮಾಧವಿ ಅಂದಿನ ದಿನಪತ್ರಿಕೆ ಓದುತ್ತಿದ್ದಾಳೆ. ಮಾಧವ ಕಛೇರಿಗೆ ಹೊರಡಲು ತಯಾರಾಗಿದ್ದಾನೆ)

ಮಾಧವಿ: ಇನ್ನು ಮುಂದೆ ಬೆಳಗ್ಗೆ ರಾತ್ರಿ ಮಕ್ಕಳು ಓದುವ ಸಮಯದಲ್ಲಿ ವಿದ್ಯುತ್ ಕಡಿತ ಇಲ್ಲ ಎಂದು ದಿನ ಪತ್ರಿಕೆಯಲ್ಲಿ ವಿದ್ಯುತ್ ಸಚಿವರು ಹೇಳಿಕೆ ಕೊಟ್ಟಿದ್ದಾರೆ. ಹಳ್ಳಿಗೂ ಕೂಡ ಕರೆಂಟ್ ಇರುತ್ತದಂತೆ. ಇದು ಬರೀ ಪತ್ರಿಕಾ ಹೇಳಿಕೆ ಮಾತ್ರವೊ ಅಲ್ಲ ಕಾರ್ಯಗತವಾಗುತ್ತದೊ ನೋಡಬೇಕು.

ಮಾಧವ: ಕಾರ್ಯಗತವಾದೀತು ಕಾದು ನೋಡೋಣ. ಎಲ್ಲಿ ನನ್ನ ಬ್ಯಾಗ್? ಹೊತ್ತಾಯಿತು.

(ಮಾಧವ ಹೊರಡುವನು. ತೆರೆ ಕೆಳಗಿಳಿಯುತ್ತದೆ.)

ದೃಶ್ಯ ೬

(ಲಲಿತ ಅವಳ ಮನೆಯಲ್ಲಿ ದೂರವಾಣಿ ಎದುರು ಕುಳಿತಿದ್ದಾಳೆ.)

ಲಲಿತ: ಹಲೋ ಇದು ಮೆಸ್ಕಾಂ ಕಚೇರಿಯೇ?

(ಮೆಸ್ಕಾಂ ಅಧಿಕಾರಿ ಮಾಧವ ದೂರು ವಿಭಾಗಕ್ಕೆ ಯಾವುದೋ ಕೆಲಸಕ್ಕೆಂದು ಅಲ್ಲಿಗೆ ಬಂದಾಗ ದೂರು ಸ್ವೀಕರಿಸುವ ನೌಕರ ರಾಜೀವ ಅಲ್ಲಿರಲಿಲ್ಲ. ಆಗ ಒಂದು ಫೋನು ಬರುತ್ತದೆ. ಮಾಧವನೇ ದೂರವಾಣಿ ಎತ್ತಿಕೊಳ್ಳುತ್ತಾನೆ)

ಮಾಧವ: ಹೌದು. ಏನಾಗಬೇಕು?

ಲಲಿತ: (ಸ್ವಗತದಲ್ಲಿ ಸದ್ಯ ಹಿಂದೆ ಮಾತಾಡಿದ ನೌಕರ ಅಲ್ಲ. ಬಹಳ ಸೌಜನ್ಯದಿಂದ ಕೇಳುತ್ತಿದ್ದಾರೆ.) ಸರ್ ಇದು ನಾನು ೨ನೆ ಬಾರಿ ದೂರು ಸಲ್ಲಿಸುತ್ತಿರುವುದು.

ಮಾಧವ: ಎಷ್ಟು ಸಲ ಬೇಕಾದರೂ ದೂರವಾಣಿ ಮಾಡಿ ಮೇಡಂ. ನಿಮ್ಮ ಸಮಸ್ಯೆ ಹೇಳಿ. ಪರಿಹರಿಸಬಹುದು. ನಾವಿರುವುದೇ ಅದೇ ಕೆಲಸಕ್ಕೆ. ಸಂಕೋಚ ಇಲ್ಲದೆ ಹೇಳಿ ಮೇಡಂ.

ಲಲಿತ: ಧನ್ಯವಾದಗಳು ಸರ್. ನೀವು ಈ ಭರವಸೆ ಕೊಟ್ಟದ್ದಕ್ಕೆ. ಹಿಂದೆ ನಾನು ಮಾಡಿದಾಗ ಇಂಥ ಉತ್ತರ ಸಿಕ್ಕಿರಲಿಲ್ಲ. ಇದು ನಮಗೆ ಸಂಬಂಧಪಟ್ಟದ್ದಲ್ಲ ಎಂಬ ಉಡಾಫೆಯ ಉತ್ತರ ಸಿಕ್ಕಿತ್ತು.

ಮಾಧವ: ಕ್ಷಮಿಸಬೇಕು ಮೇಡಂ. ನಿಮಗೆ ಒರಟು ಉತ್ತರ ಸಿಕ್ಕಿದ್ದಕ್ಕೆ. ಹೇಳಿ ಮೇಡಂ ಏನು ಸಮಸ್ಯೆ?

ಲಲಿತ: ವಿಜಯನಗರದಿಂದ ನಾನು ಮಾತಾಡುತ್ತಿರುವುದು. ಇಲ್ಲಿ ಬೀದಿದೀಪಗಳು ಇನ್ನೂ ಉರಿಯುತ್ತಲೇ ಇವೆ. ಈಗ ಸಂಜೆ ೩ ಗಂಟೆ. ಇದಕ್ಕೆ ಏನರ್ಥ? ಹಿಂದೆಯೂ ಇದೇ ವಿಷಯಕ್ಕೆ ನಾನು ದೂರವಾಣಿಸಿದ್ದು. ಏಕೆ ಹೀಗೆ ವಿದ್ಯುತ್ ಪೋಲು ಮಾಡುತ್ತಿದ್ದಾರೆ? ಆ ಕೆಲಸಕ್ಕೆ ನೇಮಕವಾದವರು ಸರಿಯಾಗಿ ಅವರ ಕರ್ತವ್ಯ ನಿರ್ವಹಿಸುತ್ತಿಲ್ಲ. ದಯವಿಟ್ಟು ವಿಚಾರಿಸಿ. ಎಷ್ಟೋ ಸಲ ಈ ದೃಶ್ಯವನ್ನು ಹಗಲು ಹೊತ್ತು ಎಷ್ಟೋ ಬೀದಿಗಳಲ್ಲಿ ನಾನು ನೋಡಿದ್ದೇನೆ. ದೂರವಾಣಿಸಿದರೂ ಏನೂ ಪ್ರಯೋಜನವಾಗಲಿಲ್ಲ. ನಾನು ದೂರವಾಣಿಸಿ ನಷ್ಟ ಮಾಡಿಕೊಂಡದ್ದಷ್ಟೆ ಬಂತು. ಈಗಲೂ ಅಷ್ಟೆ ವಿದ್ಯುತ್ ಪೋಲಾಗುವುದನ್ನು ನೋಡಿ ಸಹಿಸಲಾರದೆ ದೂರವಾಣಿಸಿದೆ. ಇನ್ನಾದರೂ ಕಟ್ಟುನಿಟ್ಟಿನ ಕ್ರಮ ಕೈಗೊಂಡು ನಿಗಾವಹಿಸಿ ಕೆಲಸಮಾಡಲು ಸಂಬಂದಪಟ್ಟವರಿಗೆ ತಿಳಿಸಿ. ಈ ರೀತಿ ಎಷ್ಟು ಬೀದಿಗಳಲ್ಲಿ ಹಗಲು ವಿದ್ಯುತ್ ಉರಿಯುತ್ತಿದೆಯೊ ಬಲ್ಲವರಾರು? ಏಕೆ ಪದೇ ಪದೇ ಇಂಥ ಕರ್ತವ್ಯ ಲೋಪವಾಗುತ್ತಿದೆ?

ಮಾಧವ: ನಾನು ವಿಚಾರಿಸುತ್ತೇನೆ ಮೇಡಂ. ನೀವು ದೂರವಾಣಿಸಿ ಹೇಳಿದ್ದು ಬಹಳ ಒಳ್ಳೆಯದಾಯಿತು. ಕೆಲಸಗಾರರು ಬೇಜವಾಬ್ದಾರಿಯಿಂದ

ನಡೆದುಕೊಳ್ಳುತ್ತಾರೆ. ಅವರಿಗೆ ಎಷ್ಟು ಎಚ್ಚರಿಕೆ ಕೊಟ್ಟರೂ ಆಗಾಗ ಇಂಥ ಪ್ರಮಾದಗಳು ನಡೆಯುತ್ತಲೇ ಇರುತ್ತವೆ. ಹೀಗೆ ನಿಮ್ಮಂಥವರು ನಮ್ಮನ್ನು ಎಚ್ಚರಿಸಿದರೆ ಅಂಥವರ ಮೇಲೆ ಕ್ರಮಕೈಗೊಳ್ಳಲು ಬಹಳ ಉಪಕಾರವಾಗುತ್ತದೆ. ನಾನು ಈಗಲೇ ಆ ಬೀದಿ ದೀಪಗಳನ್ನು ನಂದಿಸಲು ಕ್ರಮ ಕೈಗೊಳ್ಳುತ್ತೇನೆ. ತುಂಬ ಉಪಕಾರವಾಯಿತು. ಸಾರ್ವಜನಿಕರು ಇಂಥ ಪ್ರಮಾದ ಕಂಡು ದೂರವಾಣಿಸಿ ಹೇಳಿ ನಮಗೆ ಸಂಪೂರ್ಣ ಸಹಕಾರ ಕೊಟ್ಟರೆ ಕೆಲಸ ಕಾರ್ಯಗಳನ್ನು ಸಾಧ್ಯವಿದ್ದಷ್ಟು ಸುಸೂತ್ರವಾಗಿ ನಡೆಸಲು ಅನುಕೂಲವಾಗುತ್ತದೆ. ನಮಸ್ಕಾರ ಮೇಡಂ.

(ದೂರವಾಣಿ ಇಡುತ್ತ ಲಲಿತ ಸ್ವಗತದಲ್ಲಿ ಸದ್ಯ ಸೌಜನ್ಯದಿಂದ ಸಮಸ್ಯೆ ಕೇಳಿ ಒಳ್ಳೆಯ ಮಾತಾಡಿ ಉಪಕಾರ ಸ್ಮರಿಸುವ ಜನರೂ ಇದ್ದಾರಲ್ಲ. ಅದು ಪುಣ್ಯ ಎನ್ನುತ್ತ ಒಳಗೆ ಹೋಗುವಳು. ತೆರೆ ಬೀಳುತ್ತದೆ.)

ದೃಶ್ಯ ೭

(ಲಕ್ಷ್ಮಿ ಹಾಗೂ ಶ್ರೀಹರಿ ರಾತ್ರಿ ಚಾವಡಿಯಲ್ಲಿ ಮಾತಾಡುತ್ತ ಕುಳಿತಿದ್ದಾರೆ. ಆಗ ವಿದ್ಯುತ್ ಇರಲಿಲ್ಲ. ಗ್ಯಾಸ್ ದೀಪ ಉರಿಸಿಟ್ಟಿದ್ದಾರೆ.)

ಲಕ್ಷ್ಮಿ: ಪೇಟೆಯಲ್ಲಿ ಮಕ್ಕಳಿಗೆ ಓದಲು ತೊಂದರೆ ಆಗುತ್ತದಂತೆ. ಹಾಗಾಗಿ ರಾತ್ರಿ ಹಾಗೂ ಬೆಳಗಿನ ಜಾವ ವಿದ್ಯುತ್ ಕಡಿತ ಇಲ್ಲ ಎಂದು ಸಚಿವರು ಹೇಳಿಕೆ ಕೊಟ್ಟ ೨ ದಿನದಲ್ಲೇ ಕರೆಂಟ್ ಕಡಿತ ಆಗಿದೆ. ಹಳ್ಳಿಗೂ ಒಂದು ಫೇಸ್ ವಿದ್ಯುತ್ ರಾತ್ರಿ ಕೊಡುತ್ತಾರೆ ಎಂದು ಭರವಸೆ ಕೊಟ್ಟಿದ್ದಾರೆ. ಅದು ಹೇಳಿಕೆ ಮಾತ್ರ. ಪೇಟೆಯಲ್ಲೂ ರಾತ್ರಿ ವಿದ್ಯುತ್ ಕಡಿತ ಆಗಿದೆ ಎಂದು ಲಲಿತ ಹೇಳಿದಳು. ಕೊಟ್ಟ ಮಾತನ್ನು ಕಾರ್ಯಗತಗೊಳಿಸಲು ಆಗದಿದ್ದರೆ ಆಶ್ವಾಸನೆ ಕೊಟ್ಟು ಜನರನ್ನು ಮರುಳು ಮಾಡಬೇಕೆಂಬ ಯೋಚನೆಯೇ? ಕೈಲಾಗದಿದ್ದರೆ ಏಕೆ ಅಂಥ ಹೇಳಿಕೆ ಕೊಡಬೇಕು? ಜನರೇನು ಅಷ್ಟು ಪೆದ್ದರು ಎಂದು ಅವರ ಭಾವನೆಯೆ? ನಮ್ಮ ಹಳ್ಳಿಯಲ್ಲಂತೂ ವಿದ್ಯುತ್ ಕಡಿತದಲ್ಲಿ ಏನೂ ಬದಲಾವಣೆ ಆಗಲಿಲ್ಲ. ಅದೇ ರೀತಿ ಇದೆ. ಕರೆಂಟ್ ಯಾವಾಗ ಹೋಗುತ್ತದೆ ಯಾವಾಗ ಬರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಬೆಂಗಳೂರಿನಲ್ಲಿ ಮಾತ್ರ ವಿದ್ಯುತ್ ಹೋಗುವುದೇ ಅಪರೂಪವಂತೆ. ಏಕೆಂದರೆ ಅದು ಕರ್ನಾಟಕದ ರಾಜಧಾನಿ ಅಲ್ಲವೆ.

ಶ್ರೀಹರಿ: ಹೌದು. ಪೇಟೆಯಲ್ಲಿ ಮಾತ್ರ ನೋಡು ಓದುವ ಮಕ್ಕಳು ಇರುವುದು. ಹಳ್ಳಿಯಲ್ಲಿ ಯಾರೂ ಓದುವುದೇ ಇಲ್ಲ. ಸಚಿವರ ಮಾತನ್ನು ನಿಜ ಎಂದು ಯಾರೂ ತಿಳಿಯುವುದಿಲ್ಲ. ಏನೋ ಹೇಳಿಕೆ ಕೊಟ್ಟುಬಿಡುತ್ತಾರೆ. ಅದರ ಪೂರ್ವಾಪರ ಯೋಚಿಸಿರುವುದಿಲ್ಲ. ನೋಡುವ ಮುಂದೆ ಎಂದಾದರೂ ಈ

ಕರೆಂಟಿನ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗಬಹುದು ಎಂದು ಆಶಾಭಾವನೆ ತಳೆಯೋಣ. ಅಲ್ಲಿವರೆಗೆ ನಾವು ಹೀಗೆಯೇ ಮೆಸ್ಕಾಂನವರೊಡನೆ ಮು(ಗು)ದ್ದಾಟವಾಡುತ್ತ ಇರೋಣ. ಕರ್ನಾಟಕದ ಮಂದಿ ಅದರಲ್ಲೂ ಕೃಷಿಕರು ಯಾವಾಗಲೂ ಆಶಾಜೀವಿಗಳು. ತಾಳ್ಮೆ ಹಾಗೂ ಕ್ಷಮೆಯೇ ಅವರ ಹುಟ್ಟು ಗುಣ. ಅದನ್ನು ಮುಂದೆಯೂ ಕಾಪಾಡಿಕೊಂಡು ಬರೋಣ!

ಜನ ಹೆಚ್ಚೆಚ್ಚು ಸೋಲಾರ್ ದೀಪಗಳನ್ನು ಅಳವಡಿಸಿಕೊಳ್ಳಬೇಕು. ಪೇಟೆಯಲ್ಲಿಯ ಮಂದಿ ಬಿಸಿನೀರಿಗೆ ಸೋಲಾರ್ ಹಾಕಿಸಿಕೊಳ್ಳಬೇಕು. ಆದಷ್ಟು ವಿದ್ಯುತ್ ಉಪಯೋಗವನ್ನು ಕಡಿಮೆಗೊಳಿಸಲು ನೋಡಬೇಕು. ಸೋಲಾರ್ ಪರಿಕರಗಳಿಗೆ ಈಗ ಇರುವ ದರವನ್ನು ಕಡಿಮೆಗೊಳಿಸಿ ಅದು ಜನರ ಕೈಗೆಟಕುವಂತಿದ್ದರೆ ಅದನ್ನು ಬಳಸಲು ಹೆಚ್ಚಿನವರು ಆಸಕ್ತಿ ತೋರಿಸಿಯಾರು. ಸರಕಾರ ಅದಕ್ಕೆ ಸಬ್ಸಿಡಿ ನೀಡಲು ಮುಂದೆ ಬರಬೇಕು. (ಹಿಂದೆ ಸಬ್ಸಿಡಿ ಕೊಡುತ್ತಿದ್ದರು. ಈಗ ಅದನ್ನು ನಿಲ್ಲಿಸಿದ್ದಾರೆ.) ಆಗ ವಿದ್ಯುತ್ ಸಮಸ್ಯೆ ತನ್ನಿಂದ ತಾನೆ ಬಗೆಹರಿಯುತ್ತದೆ. ನಾವೂ ಮುಂದಿನ ಬಾರಿಯ ನಮ್ಮ ಬಜೆಟಿನಲ್ಲಿ ಮನೆಗೆ ಸೋಲಾರ್ ದೀಪಗಳನ್ನೇ ಎಷ್ಟು ಸಾಧ್ಯವೋ ಅಷ್ಟು ಅಳವಡಿಸೋಣ. ಜೈ ಮೆಸ್ಕಾಂಗೆ.

ಲಕ್ಷ್ಮಿ: ಆಯಿತು ಹಾಗೆಯೇ ಮಾಡೋಣ.

(ತೆರೆ ಸರಿಯುತ್ತದೆ. ನಾಟಕ ಮುಕ್ತಾಯವಾಗುತ್ತದೆ.)

ಪುಣ್ಯಕೋಟಿಯ ಕಥೆ (ಉತ್ತರ ಕಾಂಡ)

ಪ್ರಶ್ನೆ: ಅಂತಹ ಸಾತ್ವಿಕ ಪುಣ್ಯಕೋಟಿ ಸ್ವರ್ಗಕ್ಕೆ ಹೋದಾಗ ಅವಳನ್ನ ಒಳಗೆ ಬಿಡಲಿಲ್ಲ ಏಕೆ?

ಉತ್ತರ: ಅದು ಹೀಗೆ. ಪುಣ್ಯಕೋಟಿ ಅರ್ಬುದನಿಗೆ ತನ್ನನ್ನು ಒಪ್ಪಿಸಿಕೊಳ್ಳುವಾಗ ''ಖಂಡವಿದೆಕೋ, ಮಾಂಸವಿದೆಕೋ...'' ಎಂದೆಲ್ಲಾ ಬಹು ಔದಾರ್ಯದ ಮಾತುಗಳನ್ನಾಡಿ ಕೊನೆಗೆ ''ಚಂಡ ವ್ಯಾಘ್ರನೆ'' ಎಂದು ಹೇಳಿ ತನ್ನ ಮನಸ್ಸಿನ ವ್ಯಗ್ರತೆ (ರ್‍ಯಾಂಕರ್) ಯನ್ನು ಪ್ರದರ್ಶಿಸಿ ಔದಾರ್ಯದ ಪುಣ್ಯವನ್ನೆಲ್ಲಾ ನೀರು ಪಾಲು ಮಾಡಿತು. ಅದಕ್ಕೆ.

– ಶಿವು

CPMG / KA / BGW-[illegible] / 2006-08 RNI-KAR KAN / 2005 / 15457
Mailing Date: 5th of every month / Mailed at Rajajinagar P.O.

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.
Printed at: RAVI GRAPHICS, 60/2, 2nd Main Road, Industrial Town, Rajajinagar, Bangalore - 560 044. PH : 2330 5999.
Editor: M. SHIVAKUMAR